ಹಾಗತಿ

ತಿಂಗಳ ಪತ್ರಿಕೆ

ಮೇ : 2000

- ದಲಿತ ಮತ್ತು ಸ್ವಾಯತ್ತ ಮಹಿಳಾ ಸಂಘಟನೆಗಳು
- ತಂತ್ರಜ್ಞಾನ ಬದಲಾವಣೆ ಮತ್ತು ಕೈಗಾರಿಕಾ ಮಹಿಳಾ ಕಾರ್ಮಿಕರು
- ಯಾರು 'ಹಿತವರು' ನಮಗೆ......
- ಲೈಂಗಿಕ ಅಲ್ಪಸಂಖ್ಯಾತ ಗುಂಪುಗಳ ಮೇಲೆ ಪೊಲೀಸ್ ದೌರ್ಜನ್ಯದ ವಿರುದ್ಧ ಹೋರಾಟದ ಒಂದು ವರದಿ

ಮಾನಸ

ತಿಂಗಳ ಪತ್ರಿಕೆ

ಸಂಪುಟ : 15 ಸಂಚಿಕೆ : 4

ಮೇ : 2000

ವಿಳಾಸ

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **3-00** ರೂ.

ವಾರ್ಷಿಕ ಚಂದಾ **40-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ಸಂಪಾದಕೀಯ



ಪ್ರತಿ ವರ್ಷದಂತೆ ಕಾರ್ಮಿಕ ಕ್ರಾಂತಿಯಿಂದಾಗಿ ಆಚರಿಸುತ್ತಾ ಬಂದಿರುವ ಕಾರ್ಮಿಕ ದಿನ ದುಡಿಮೆಯ ವ್ಯಾಪ್ತಿಗೆ ಬರದ ಮಹಿಳೆಯ ಅವಿರತ ಮನೆ ಕೆಲಸವನ್ನು ತನ್ನ ತೋಳ್ತೆಕ್ಕೆಗೆ ತೆಗೆದುಕೊಳ್ಳುವುದು ಯಾವಾಗ ಎಂದಷ್ಟೆ ಯೋಚಿಸುತ್ತಿದ್ದೆವು. ಇತ್ತೀಚಿನ ಬೆಳವಣಿಗೆ ಗ್ಲೋಬಲೈಸೇಷನ್ ಹಾಗೂ ಇತರೆ ಧಾಳಿಗಳು ಆ ಪ್ರಶ್ನೆಯನ್ನು; ಕಲ್ಪನೆಯನ್ನೂ ಅಲುಗಾಡಿಸಿದೆ. ಕಾರ್ಮಿಕರು ಅಂದರೆ ಉಳ್ಳವರ ಹಿತಕ್ಕೆ ದುಡಿಯುವವರು ಎಂದು ಅರ್ಥೈಸುವುದಾದರೆ, ಹೆಂಗಸರು ಮಾಡುವ ಎಲ್ಲಾ ಗೃಹಕೃತ್ಯ , ನಿಸ್ವಾರ್ಥ ಆದಾಯ ರಹಿತ ಸೇವೆಗಳೆಲ್ಲ ಸ್ವಹಿತಕ್ಕೆ ಎಂದು ಪರಿಗಣಿಸಿ ಆಕೆ ಎಲ್ಲಾಥರದ ಸೌಲಭ್ಯ ಹಾಗೂ ಗುರುತಿಸುವಿಕೆಯಿಲ್ಲದೆ ಸುಲಭವಾಗಿ ಹೊರದೂಡಲ್ಪಟ್ಟಿದ್ದಾಳೆ. ಯಾವುದೇ ಅರ್ಥದಲ್ಲಿ ಪರಿಗಣನೆಯಾಗದ ಮನೆಕೆಲಸ ಅವಳನ್ನು ಕಾರ್ಮಿಕಳೆಂಬ ಮನ್ನಣೆಯಿಂದ ದೂರ ವಿಟ್ಟಿದ್ದಲ್ಲದೆ ವಿಶ್ರಾಂತಿ, ಬೇಡಿಕೆಗೂ ತೆರೆ ಎಳೆದಿದೆ.

ಮನೆ ಕೆಲಸದೊಂದಿಗೆ ಗೊಣಗಾಡದೆ ಆಸರಿಕೆ-ಬೇಸರಿಕೆ ಮರೆತು, ಮನೆ ಒಡೆಯ "ಕಾರ್ಮಿಕ"ನೆಂಬ ಹಣಪಟ್ಟಿಯಡಿಯಲ್ಲಿ ತರುತ್ತಿರುವ ಆದಾಯ ಸಂಸಾರದ ಬಂಡಿ ಎಳೆಯಲು ಸಾಕಾಗದಿದ್ದಕ್ಕಾಗಿ ಹಪ್ಪಳ, ಉಪ್ಪಿನಕಾಯಿ, ಬಟ್ಟೆ ಹೊಲೆಯುವುದು, ಬೀಡಿ ಅಗರಬತ್ತಿ ಸುತ್ತುವುದೋ ಹೀಗೆ ಬಿಡುವಿಲ್ಲದ ದಿನದಲ್ಲಿ ಬಿಡುವಾಗಿಸಿಕೊಂಡು ಗಳಿಸುತ್ತಿದ್ದ ಪುಡಿಗಾಸಿಗೂ ಈಗ ದಕ್ಕೆ ಬಂದಿದೆ. ಉದ್ಯೋಗ ಕಡಿತ, ಬಹುರಾಷ್ಟ್ರೀಯ ಕಂಪನಿಗಳಿಗೆ ರತ್ನಗಂಬಳಿ ಹಾಸಿದಷ್ಟೆ ಅಲ್ಲದೆ ನಮ್ಮ ಸರ್ಕಾರ ಅವರ ಎಲ್ಲಾ ಬೇಡಿಕೆಗಳನ್ನಷ್ಟೆ ಅಲ್ಲದೆ 117 ವಸ್ತುಗಳ ಮುಕ್ತ ಆಮದಿಗೂ ಸಹಿ ಗುದ್ದಿದೆ. ಕಾರ್ಮಿಕರಲ್ಲದ, ಅಸಂಘಟಿತ ಈ ಜನ ತಯಾರಿಸುತ್ತಿದ್ದ ಹಪ್ಪಳ ಉಪ್ಪಿನಕಾಯಿಯಿಂದ ಪೊರಕೆವರೆಗೂ ಹೊರದೇಶದಿಂದ ಮುಕ್ತ ಮಾರುಕಟ್ಟೆಯಿಂದಾಗಿ ನಮ್ಮಲ್ಲೂ ಬಂದು ಸ್ಪರ್ಧೆ ಏರ್ಪಡಿಸಲಿವೆ. ಈ ಸಹಿಯಿಂದಾಗಿ ಅವಳ ಈ ದೇಶೀ ಸೇವೆಗೆ ಕವಡೆ ಕಿಮ್ಮತ್ತು ಇಲ್ಲದೆ, ಸಮಾಜ ನೇರ ಹೊಡೆತಕ್ಕ ಒಳಗಾದರೆ ಮಹಿಳೆಯರನ್ನು ಪೂರ್ಣ ನೆಲಕ್ಕೆ ತುಳಿಯುವುದರಲ್ಲಿ ಯಾವ ಸಂದೇಹವೂ ಇಲ್ಲ.

ಕೆಲಸ, ಕಾರ್ಮಿಕ, ಬೆಲೆ ಎಂದೆಲ್ಲ ವಿಚಾರ ಬಂದಾಗ, ಮೇಲೆ ಹೇಳಿದ ಇಂಥ ಅಚಾಗರೂಕತೆ ನಡೆದಾಗ ಕೂಡ ನಾವು ವರ್ಗಾಧಾರಿತವಾಗೇ ನೋಡಬೇಕಾಗುತ್ತದೆ. ಕಾರ್ಮಿಕ ಮನ್ನಣೆಗೆ ಒಳಪಡದ, ದುಡಿಮೆಯ ಚ್ಯುತಿಗೆ ದಕ್ಕೆ ಬರುವ ಮೇಲಿನ ಹೆಸರಿಸಿದ ಹೆಂಗಸಿನ ಉತ್ಪಾದನೆಗೆ ಧಕ್ಕಿಬಂದ ಇಂಥ ಸಂದರ್ಭದಲ್ಲೂ ಕೂಡ ಕಾರ್ಮಿಕ ವರ್ಗ ಅತ್ತ ತಲೆ ಕೆಡಿಸಿಕೊಂಡು ಬೆಂಬಲಿಸುವುದಿಲ್ಲ. ಮೇಲ್ವರ್ಗಕ್ಕೆ ಇದರ ಉಸಾಬರಿಯೇ ಬೇಡ, ಕೆಳವರ್ಗಕ್ಕೆ ಹೋರಾಡಿ ತಡೆಯುವ ಆರ್ಥಿಕ ಸಾಮರ್ಥ್ಯವಿಲ್ಲ, ಇನ್ನು ಮಧ್ಯಮ ವರ್ಗ ಗೊಣಗಾಡುತ್ತಲೇ ನಮ್ಮದೆಲ್ಲವನ್ನು ತಿರಸ್ಕರಿಸಿ. ಅಷ್ಟೇ ಬೆಲೆಗೆ/ಅಥವಾ ಕಡಿಮೆಗೆ ದೊರಕುವ ಆಮದಾದ ವಸ್ತುಗಳಿಗೆ "ಕ್ವಾಲಿಟಿಯ" ಹಣೆಪಟ್ಟಿ ಹಚ್ಚಿ, ಸಾರಾಸಗಟಾಗಿ ನಮ್ಮೆಲ್ಲ ಶ್ರಮ ಹಾಗೂ ಭವಿಷ್ಯವನ್ನು ಮೂಲೆಗುಂಪಾಗಿಸುತ್ತದೆ.

ಕಾರ್ಮಿಕ ಚೌಕಟ್ಟಿಲ್ಲದೆ ಬಿಡಿಕಾಸಿಗಾಗಿ ಪಡುತ್ತಿದ್ದ ಪರಿಶ್ರಮ ಅವಿವೇಕದ ರಾಜಕೀಯ ಹಾಗೂ ವರ್ಗ ಹಿತದಿಂದಾಗಿ ನಶಿಸಿಹೋಗುತ್ತದೆ. ಭಾರತದ ಸಹಿಯ ನಂತರ ಮೇಲೆ ಹೇಳಿರುವ ಪರಿಸ್ಥಿತಿ ನಿಸ್ಸಂದೇಹವಾಗಿ ಇಂದಲ್ಲ ನಾಳೆ ನಮ್ಮ ಮುಂದೆ ಬರುತ್ತದೆ. ಇವುಗಳ ಬಗ್ಗೆ ಪರಿಪೂರ್ಣ ಮಾಹಿತಿ, ಸಂಘಟಿತ ಹೋರಾಟ, ನಮ್ಮ ಶ್ರಮಕ್ಕೆ ಪ್ರತಿಫಲ, ಹಾಗೂ ಗುರುತಿಸುವಿಕೆ ದುಡಿಮೆಯ ವ್ಯಾಪ್ತಿಗೆ ನಮ್ಮ ಈ ಎಲ್ಲಾ ತುಣುಕು ತುಣುಕು ಕೆಲಸ ಒಳಪಡಲೇಬೇಕು. ಇದು ಯಾರದೇ ಒಬ್ಬರ ಕೆಲಸವಲ್ಲ ಮಹಿಳೆ, ಕಾರ್ಮಿಕ, ಮಹಿಳಾ ಚಳುವಳಿ, ಶಿಕ್ಷಿತ-ಅಶಿಕ್ಷಿತ ಜನಸಮೂಹ ಹೀಗೆ ಒಟ್ಟಾರೆ ಇಡೀ ದೇಶಕ್ಕೆ ಸಂಕಷ್ಟ ತರುವ ಆ ಮೂಲಕ ಮಹಿಳೆಯರನ್ನು ಮತ್ತಷ್ಟು ನಿಶ್ಯಕ್ತರನ್ನಾಗಿ ಮಾಡುವ ಈ ಎಲ್ಲಾ ಪ್ರಕ್ರಿಯೆಗಳು ಕಾರ್ಮಿಕರ ಬೆಂಬಲ ಪಡೆದು ಹೊಸ ದಿಕ್ಕಿನತ್ತ ನಡೆಯುವಂತಾಗಬೇಕು.

ದಲಿತ ಮಹಿಳೆ, ಲೈಂಗಿಕ ಶೋಷಿತರ ಮೇಲಿನ ಪೋಲಿಸ್ ದೌರ್ಜನ್ಯವನ್ನು ವಿರೋಧಿಸಿ ನಡೆದ ಕಾರ್ಯಕ್ರಮಗಳು ಹಾಗೂ ಇತರೆ ಲೇಖನಗಳನ್ನು ಒಳಗೊಂಡ ಈ ಪತ್ರಿಕೆ ನಿಮ್ಮ ಅನಿಸಿಕೆಯ ನಿರೀಕ್ಷೆಯಲ್ಲಿರುತ್ತದೆ.

ದಲಿತ ಮತ್ತು ಸ್ವಾಯತ್ತ ಮಹಿಳಾ ಸಂಘಟನೆಗಳು

ನಮ್ಮ ಸುತ್ತ-ಮುತ್ತ ಇರುವ ವಾಸ್ತವವನ್ನು ಗಮನಿಸಿದಾಗ ಸ್ತ್ರೀಗೆ ಎಷ್ಟೊಂದು ಪೂರಕ ವಾತಾವರಣ ಏರ್ಪಟ್ಟಿದೆ ಎಂಬ ಭಾವನೆ ಬರುತ್ತದೆ. ಹೆಚ್ಚು ಜನ ಮಹಿಳೆಯರು ಹೊರಗಡೆ ಕೆಲಸ ಮಾಡುವುದು ಕಾಣುತ್ತದೆ. ಟಿ.ವಿ. ಮಾಧ್ಯಮಗಳು ಮಹಿಳೆಯರಿಗೆ ಹೆಚ್ಚು ಆದ್ಯತೆ ನೀಡಿದಂತೆ ಕಾಣುತ್ತದೆ. ಜಾಹೀರಾತುಗಳಲ್ಲಿ ಹೆಂಗಸರ ಹೊಸ 'ಮಾದರಿ'ಗೆ ಸಂಬಂಧಿಸಿ ಹೊಸ, ಹೊಸದಾದ ಭಾಷೆ-ವ್ಯಾಖ್ಯಾನಗಳು ಹುಟ್ಟಿಕೊಳ್ಳತೊಡಗಿವೆ. ಧಾರಾವಾಹಿ, ಸಿನಿಮಾಗಳು ಸ್ತ್ರೀಯರ ಸಮಸ್ಯೆಯ ಸುತ್ತ ಮಾಡಲ್ಪಡುತ್ತಿವೆ. ಮಹಿಳಾ ಮೀಸಲಾತಿಯಿಂದಾಗಿ ಪಂಚಾಯತಿಗಳಲ್ಲಿ ಮಹಿಳೆಯರು ಕಾಣಿಸಿಕೊಳ್ಳುತ್ತಿದ್ದಾರೆ, ಉದ್ಯೋಗ ಮೀಸಲಾತಿಯಿಂದಾಗಿ ಪುಷ್ಪಕ್ ಬಸ್‌ಗಳಲ್ಲಿ ಮಹಿಳಾ ಕಂಡಕ್ಟರ್ ಕಾಣಿಸಿಕೊಳ್ಳತೊಡಗಿದ್ದಾರೆ, ಮಹಿಳೆಯರಿಗೆ ಸಂಬಂಧಿಸಿದ ಯೋಜನೆಗಳಿಗೆ ರಾಜ್ಯ ಹೆಚ್ಚು ಹೆಚ್ಚು ಪ್ರಾಶಸ್ತ್ಯ ನೀಡತೊಡಗಿದೆ. ಮಹಿಳಾ ಆಯೋಗಗಳು ಹೆಚ್ಚಾಗತೊಡಗಿವೆ, ವಿಶ್ವವಿದ್ಯಾನಿಲಯಗಳಲ್ಲಿ ಮಹಿಳಾ ಅಧ್ಯಯನಗಳು ಹೆಚ್ಚುತ್ತಿವೆ. ಮಹಿಳೆಯರ ಬಗ್ಗೆ ಅಧ್ಯಯನ ನಡೆಸುವವರ ಸಂಖ್ಯೆ ಹೆಚ್ಚಾಗತೊಡಗಿದೆ. ಸಾಹಿತ್ಯದಲ್ಲಿ ಮಹಿಳಾವಾದ ಎತ್ತಿ ಹಿಡಿಯುವವರ ಸಂಖ್ಯೆ ಕಂಡುಬರುತ್ತಿದೆ. ಹಲವಾರು ಸಾಧನೆಗಳನ್ನು ಮಾಡಿದ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಿದೆ. ಹಾಗಿದ್ದಲ್ಲಿ 'ಸ್ತ್ರೀ'ಯ ಹೊಸದಾದ ಒಂದು 'ಮಾದರಿ' ಹುಟ್ಟಿಕೊಳ್ಳತೊಡಗಿದೆಯೇ? ಈ 'ಸ್ತ್ರೀ'ಯ ಕಲ್ಪನೆ ನಮ್ಮ ಅಂದರೆ ಸ್ವಾಯತ್ತ ಗುಂಪುಗಳ ಕಲ್ಪನೆಯೇ? ನಮ್ಮ ಪರಿಭಾಷೆಯ ನೆಲೆಗಳು ಸಾಂಸ್ಕೃತಿಕ ನೆಲೆಗಳನ್ನು ರೂಪಿಸುವಲ್ಲಿ ಸೋತಿವೆಯೇ? ಯಾವುದೇ ಚಳುವಳಿ ಆಯಾ ಸಂಸ್ಕೃತಿಯ ಐತಿಹಾಸಿಕ ಭಾಗವಾಗಿ ಪರಿಗಣಿತವಾಗಿದೆಯೇ? ಮೇಲೆ ಸೂಚಿಸಿದ ಹೆಣ್ಣಿನ 'ಮಾದರಿ' - ಮಧ್ಯಮ ವರ್ಗದ ಓದು-ಬರಹ ಬಲ್ಲ ಸ್ತ್ರೀಯರದ್ದಾಗಿ ಮಾತ್ರ ಕಾಣಿಸಿಕೊಳ್ಳುವುದೇಕೆ?

ಈ ಎಲ್ಲಾ ಪ್ರಶ್ನೆಗಳಿಗೆ ಪ್ರಭುತ್ವ ಚಳುವಳಿಗಳನ್ನು Co-opt. ಮಾಡುವ ಬಗೆ, ಬಂಡವಾಳಶಾಹಿತ್ವ ಹೊಸ ಹೊಸ ಪರಿಭಾಷೆಗಳನ್ನು ತನ್ನ ಮಾರ್ಕೆಟ್‌ಗೆ ಬಳಸಿಕೊಳ್ಳುವ ಬಗೆ, ಒಂದು ಹೊಸ ಅಲೆ ಬೀಸಿದಾಗ ಅದು ಮೇಲ್ಮೈ ಮಟ್ಟದಲ್ಲಿ ಎಲ್ಲರನ್ನೂ ಒಳಗೊಳ್ಳುವ ಬಗೆ, ಜನಪ್ರಿಯ ಮಾಧ್ಯಮ ಎಲ್ಲದನ್ನೂ ಹೈಜಾಕ್ ಮಾಡುವ ರೀತಿಗಳಲ್ಲಿ ಉತ್ತರಿಸಬಹುದು. ಹಳೆಯ ವಿಚಾರವನ್ನು ಹೊಸ ಮಡಿಕೆಗಳಲ್ಲಿ ಆಕರ್ಷಕವಾಗಿ ಹೇಳುವ ಬಂಡವಾಳ ಶಾಹಿತ್ವ/ಪಿತೃಪ್ರಧಾನ್ಯತೆಯ ರೀತಿಗಳಲ್ಲಿ ಉತ್ತರಿಸಬಹುದು. ಈ ರೀತಿ ವರ್ಗ/ಜಾತಿ/ಪಿತೃಪ್ರಾಧಾನ್ಯತೆಯ ಸಂಕೀರ್ಣತೆಗಳು ಬದಲಾಗದೇ ಹುಟ್ಟಿಕೊಳ್ಳುತ್ತಿರುವ 'ಮಹಿಳಾ ಮಾದರಿ' ನಾವು ಹೇಳುವ ಪರಿಭಾಷೆಯ ಹೆಣ್ಣಿನ ಕಲ್ಪನೆ ಯಲ್ಲವಾದರೆ, ನಮ್ಮ ಹೋರಾಟದ ಇತಿಹಾಸವನ್ನು ಈ ಸಂದರ್ಭದಲ್ಲಿ ಅವಲೋಕಿಸುವುದು ಹೆಚ್ಚು ಅಗತ್ಯವಾಗುತ್ತದೆ. 'ಸ್ತ್ರೀ'ಯ ಸುತ್ತ 'ಅಭಿವೃದ್ಧಿ ಮಾದರಿ' ಹೆಚ್ಚಾಗುತ್ತಿರುವ ಹಾಗೆ 'ಹೋರಾಟದ ಮಾದರಿ'ಯ ದೃಷ್ಟಿಕೋನಗಳು ಏಕೆ ಕಡಿಮೆ ಯಾಗುತ್ತಿವೆ ಎಂಬುದನ್ನು ಕೂಡಾ ನಾವು ಅವಲೋಕಿಸ ಬೇಕಾಗುತ್ತದೆ.

'ವೈಯಕ್ತಿಕವೆಂಬುದು ರಾಜಕೀಯ'

1975 ರಿಂದಲೂ 'ವೈಯಕ್ತಿಕ ಎಂಬುದು ರಾಜಕೀಯ' ಎಂಬುದರ ಮೇಲೆ ಸ್ವಾಯತ್ತ ಮಹಿಳಾ ಸಂಘಟನೆಗಳು ಹೆಚ್ಚು ಒತ್ತು ನೀಡಿದವು. 1985ರವರೆಗೆ ವರದಕ್ಷಿಣೆ, ಗೃಹ ದೌರ್ಜನ್ಯ, ಅತ್ಯಾಚಾರ ಮಹಿಳೆಯರ ಆರೋಗ್ಯ ಈ ಸಮಸ್ಯೆಗಳ ಮೇಲೆ ಹೆಚ್ಚು ಒತ್ತು ನೀಡಿದವು. ಪೊಲೀಸ್ ಠಾಣೆಯಲ್ಲಿ ನಡೆಯುವ ಅತ್ಯಾಚಾರ. ವೈವಾಹಿಕ ಜೀವನದೊಳಗಿನ ಅತ್ಯಾಚಾರದಂತಹ ಸಮಸ್ಯೆಗಳಿಗೂ ಭಾರತದುದ್ದ ಮಹಿಳಾ ಗುಂಪುಗಳು ಸ್ಪಂದಿಸಿದವು. ಈ ಗುಂಪುಗಳು ಅನೇಕ ಕಾನೂನುಗಳನ್ನು ಸವಾಲು ಮಾಡಿದ್ದರಿಂದ ಕಾನೂನುಗಳಲ್ಲಿಯೂ ಕೂಡಾ ಅನೇಕ ಬದಲಾವಣೆಗಳು ಕಂಡು ಬಂದವು. 'ವೈಯಕ್ತಿಕ' ಎಂಬುದು ಹೆಚ್ಚು ಕಡಿಮೆ ಸ್ವಾಯತ್ತ ಮಹಿಳಾ ಗುಂಪುಗಳ ಕೇಂದ್ರ ಬಿಂದುವಾಗಿದ್ದು ಇದರ ಸುತ್ತ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಈ ಮೂಲಕವಾಗಿ ರಾಜಕೀಯ ಪಕ್ಷಗಳಲ್ಲಿನ ಕೇಂದೀಕೃತ ನಡವಳಿಕೆಗಳನ್ನು, ಮಹಿಳೆಯರ ಬಗೆಗಿದ್ದ ನಿರ್ಲಕ್ಷ್ಯವನ್ನು, ಪಕ್ಷಗಳಲ್ಲಿನ ಶ್ರೇಣೀಕೃತ ವ್ಯವಸ್ಥೆಯನ್ನು ಬಲವಾಗಿ ವಿರೋಧಿಸಿದವು. ಈ 'ಸ್ವಾಯತ್ತತೆ' ಎಂಬುದು ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆಯಾಗಿ ವ್ಯಾಖ್ಯಾನಿತವಾಗಿದೆ. ಮಹಿಳೆಯರ ಪ್ರಜ್ಞೆಯ ವಿಸ್ತರಿಸುವಿಕೆಯ ಜೊತೆಗೆ ಒಗ್ಗೂಡಿದ ಪ್ರಯತ್ನಗಳಿಗೆ ಹೆಚ್ಚು ಮಹತ್ವವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಪಿತೃಪ್ರಾಧಾನ್ಯತೆ, ಸ್ತ್ರೀವಾದ, ಸ್ವಾಯತ್ತತೆ ಇಂತಹ ಪ್ರಶ್ನೆಗಳಿಗೆ ಹೆಚ್ಚು ಮಹತ್ವ ಕೊಡಲಾಯಿತು. ಇತರೇ ಜನಪರ ಸಂಘಟನೆಗಳ ಜೊತೆಗೆ ಯಾವ ರೀತಿಯಲ್ಲಿ ಕೆಲಸ ಮಾಡಬೇಕೆಂಬುದರ ಬಗ್ಗೆ ಕೂಡಾ ಸ್ವಾಯತ್ತ ಸಂಘಟನೆಗಳು ಗಮನ ಕೊಡಲಾರಂಭಿಸಿದವು. ಮಹಿಳಾ ಪ್ರಶ್ನೆಗಳಿಗೆ-ಮಹಿಳಾ ಗುಂಪುಗಳು ಪ್ರತ್ಯೇಕವಾಗಿ ಉತ್ತರ ಕಂಡುಹಿಡಿಯುವುದು ಅಸಾಧ್ಯ ಎನ್ನುವ ಅರಿವು ಸ್ವಾಯತ್ತ ಮಹಿಳಾ ಸಂಘಟನೆಗಳಿಗೆ ಇತ್ತು. ಆದರೆ ಯಾವುದೇ ಸಾಮಾಜಿಕ ಹೋರಾಟವೂ ಕೂಡಾ ಮಹಿಳಾ ಅನುಭವವನ್ನು ಎತ್ತಿ ಹಿಡಿಯುವ

ಅಗತ್ಯವಿದೆ ಎಂಬುದನ್ನು ಮಹಿಳಾ ಚಳುವಳಿಯು ಎತ್ತಿ ಹಿಡಿಯಿತು.

ಈ ಚಳವಳಿಯು 75 ರಿಂದ 1985ರವರೆಗೆ ಹಲವಾರು ವಿಧದ ಟೀಕೆಗಳನ್ನು ಎದುರಿಸಿತು. ಈ ಗುಂಪುಗಳು ಕುಟುಂಬವನ್ನು ಒಡೆಯುತ್ತವೆ, ಪ್ರತ್ಯೇಕವಾದವನ್ನು ಎತ್ತಿಹಿಡಿಯುತ್ತವೆ, ಜಾತಿ, ವರ್ಗ ಸಂಘರ್ಷಗಳ ನೆಲೆಯನ್ನು ಒಡೆದುಹಾಕುತ್ತವೆ ಎಂಬ ಟೀಕೆಗಳು ಬಲವಾಗಿ ಮೂಡಿಬಂದರೂ ಸ್ವಾಯತ್ತ ಸಂಘಟನೆಗಳು ಮಥುರಾ, ಮಾಯತ್ಯಾಗಿ, ರಮೀಜಾಬಿಯ ಅತ್ಯಾಚಾರದ ಪ್ರಕರಣಗಳಲ್ಲಿ ಭಾರತದಾದ್ಯಂತ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡವು.

ಈ ಗುಂಪುಗಳಲ್ಲಿ ಹೆಚ್ಚಾಗಿ ಇದ್ದಂತವರು ನಗರದ ಮಧ್ಯಮವರ್ಗ, ವಿದ್ಯಾವಂತ ಮಹಿಳೆಯರು. ಎಡ ಪಕ್ಷಗಳಲ್ಲಿ ಇದ್ದವರು ಕೆಲವರು. ಪಕ್ಷದಿಂದ ದೂರವಾಗಿ ಸ್ವಾಯತ್ತ ಸಂಘಟನೆ ಕಟ್ಟಿದವರು. 1985ರ ಹೊತ್ತಿಗೆ ಅನೇಕ ಬದಲಾವಣೆಗಳಾದುದನ್ನು ನಾವು ಕಾಣುತ್ತೇವೆ. ಮಹಿಳಾ ಸಂಘಟನೆಗಳು ಹೆಚ್ಚಾದವು, ಆರೋಗ್ಯದ ಬಗ್ಗೆ ಶಿಕ್ಷಣ, ಕಾನೂನು ಸಲಹಾ ಸಮಿತಿಗಳು, ಮರುವಸತಿ, ಮಹಿಳಾ ಅಧ್ಯಯನ, ಪತ್ರಿಕೆಗಳು, ಔಷಧಗಳ ಬಗ್ಗೆ ಸಂಶೋಧನೆಗಳು ಹೀಗೆ ಹಲವಾರು ರೀತಿಯಲ್ಲಿ ಪ್ರಗತಿ ಕಂಡು ಬಂದುದನ್ನು ನಾವು ಗಮನಿಸಬಹುದು. ಇದೇ ಸಂದರ್ಭದಲ್ಲಿ ಇತಿಹಾಸವನ್ನು ಶೋಧಿಸಿ, ಚರಿತ್ರೆಯ ಆಯಾಮಗಳಲ್ಲಿನ ಮಹಿಳೆಯರ ಹೋರಾಟದ ಚಿತ್ರಣಗಳನ್ನು ಬೆಳಕಿಗೆ ತಂದು ಇತಿಹಾಸವನ್ನು ಮರುವಿಮರ್ಶೆ ಮಾಡುವ ಪ್ರಯತ್ನಗಳೂ ಕಂಡುಬಂದವು.

1985ರ ನಂತರ ಸ್ವಾಯತ್ತ ಚಳುವಳಿಯ ಮುಂದೆ ಇದ್ದ ಸವಾಲುಗಳು ಹಲವಾರು. 1984ರ ಶಾಬಾನು ಪ್ರಕರಣ, ಹಿಂದೂ ಸಿಖ್ ಗಲಾಟೆ, ಸಮಾನ ನಾಗರೀಕ ಸಂಹಿತೆಯ ಪ್ರಶ್ನೆ, ರಾಜಸ್ಥಾನದ ಸತಿ ಪ್ರಕರಣಗಳು ಮಹಿಳೆಯರ ಧರ್ಮ/ಜಾತಿ, ಸಮುದಾಯದ ಅಸ್ತಿತ್ವದ ಮೇಲೆ ಒತ್ತು ಹಾಕಿದವು. ಇವು ಮಹಿಳೆಯರ ಪ್ರಾಥಮಿಕ ಅಸ್ತಿತ್ವಗಳಾಗಿ ಕಾಣಿಸುವಂತೆ ಮಾಡುವ ಪ್ರಯತ್ನಗಳು ನಡೆಯತೊಡಗಿದವು. ಸ್ತ್ರೀವಾದ ಎತ್ತುವ ಪ್ರಶ್ನೆಗಳಿಗೆ ಸಮವಾಗಿ ಮೂಲಭೂತವಾದ ಅದರ ವಿವಿಧ ರೀತಿಗಳಲ್ಲಿ ಕಾಣಿಸಿಕೊಳ್ಳತೊಡಗಿತು.

1996ರಲ್ಲಿ ಪರಿಸರ ಅವನತಿ, ಮನೆ, ಅಭಿವೃದ್ಧಿ, ಮಾದರಿಗಳ ಬಗ್ಗೆಗಿನ ಕಾರ್ಯಕ್ರಮಗಳ ಜೊತೆಗೇ ಅತ್ಯಾಚಾರ, ಗೃಹ ಹಿಂಸೆ, ಕೆಲಸದ ಸ್ಥಳಗಳಲ್ಲಿ ನಡೆಯುವ ದೌರ್ಜನ್ಯ, ಒಂಟಿ ಹೆಣ್ಣಿನ ಸಮಸ್ಯೆಗಳನ್ನು ಜೊತೆ ಜೊತೆಯಾಗಿಯೇ ತೆಗೆದು ಕೊಳ್ಳಲಾಯಿತು.

90ರ ದಶಕದಲ್ಲಿ ಅನೇಕ ಗುಂಪುಗಳು 'ಸ್ತ್ರೀವಾದ' ವಿಷಯವನ್ನೇ ತಮ್ಮದಾಗಿ ಹೊಂದಿಸಿಕೊಳ್ಳತೊಡಗಿದವು. ಸ್ವಯಂ ಸೇವಾಸಂಸ್ಥೆಗಳು, ಸರ್ಕಾರಿ ಮಹಿಳಾ ಕಾರ್ಯಕ್ರಮಗಳು ಹೆಚ್ಚಾಗತೊಡಗಿದವು. ಅವುಗಳಲ್ಲಿ ಕೆಲಸ ಮಾಡುವವರ ಸಂಖ್ಯೆಯೂ ಹೆಚ್ಚಾಗತೊಡಗಿತು. ಈ ಸಂದರ್ಭದಲ್ಲಿ ಸರ್ಕಾರಿ ಹಾಗೂ ಫಾರಿನ್ ಫಂಡೆಡ್ ಪ್ರಶ್ನೆಗಳೂ ಕೂಡಾ ಗಂಭೀರವಾಗಿ ಮೂಡಿ ಬರತೊಡಗಿದವು. ಹೋರಾಟದ ದೃಷ್ಟಿಕೋನ ಹಾಗೂ ಅಭಿವೃದ್ಧಿ ದೃಷ್ಟಿಕೋನ ನಡುವಿನ ಅಂತರಗಳು ಸ್ಪಷ್ಟವಾಗಿ ಕಾಣಿಸತೊಡಗಿದವು.

ಕೋಮುವಾದ ಸ್ತ್ರೀವಾದಿ ಪ್ರಶ್ನೆಗಳನ್ನು ತಮ್ಮದನ್ನಾಗಿ ಹೊಂದಿಸಿಕೊಳ್ಳತೊಡಗಿದಂದಿನಿಂದ ಸ್ತ್ರೀವಾದ ಅನೇಕ ಸವಾಲುಗಳನ್ನು ಎದುರಿಸಬೇಕಾಯಿತು. 'ಸಮಾನ ನಾಗರೀಕ ಸಂಹಿತೆ'ಯನ್ನು ಬಿ.ಜೆ.ಪಿ. ತನ್ನ ಉದ್ದೇಶಕ್ಕಾಗಿ ಬಳಸಿಕೊಳ್ಳುವುದರ ವಿರುದ್ಧ ಹೋರಾಡುವುದರ ಬಗ್ಗೆ ಕೂಡಾ ಸ್ವಾಯತ್ತ ಮಹಿಳಾ ಸಂಘಟನೆಗಳು ನಿಲುವು ತೆಗೆದುಕೊಳ್ಳತೊಡಗಿದವು.

ಈ ಸಂದರ್ಭದಲ್ಲಿಯೇ ಗ್ರಾಹಕ ಸಂಸ್ಕೃತಿಯು ಜಾಗತೀಕರಣ ಹಾಗೂ ಮುಕ್ತ ಆರ್ಥಿಕ ನೀತಿಯಿಂದಾಗಿ ಹೊಸ ಹೆಣ್ಣಿನ ಕಲ್ಪನೆಯನ್ನು ತನ್ನ ಉದ್ದೇಶಕ್ಕೋಸ್ಕರ ಬಳಸಿಕೊಳ್ಳಲು ಪ್ರಾರಂಭಿಸಿತು. ಇಬ್ಬಗೆಯ ದುಡಿತ, ಮನೆಗೆಲಸ ಇವುಗಳನ್ನು ಕಂಪನಿಗಳು ತಮ್ಮ ಲಾಭಕ್ಕೋಸ್ಕರ ಬಳಸಿಕೊಳ್ಳಲು ಪ್ರಾರಂಭಿಸಿದವು. ಮಹಿಳೆಯರ ಸ್ಥಿತಿಯಲ್ಲಿ ಮೂಲಭೂತವಾದ ಬದಲಾವಣೆಗಳಾಗದೇ ಇರುವ ಸಂದರ್ಭದಲ್ಲಿ ಈ ರೀತಿ ಸ್ತ್ರೀವಾದದ ನೆಲೆಯನ್ನೇ ಹೈಜಾಕ್ ಮಾಡುತ್ತಿರುವುದರಿಂದ ಹೊಸ, ಹೊಸ ಸವಾಲುಗಳನ್ನು ಮಹಿಳಾ ಚಳುವಳಿ ಎದುರಿಸಬೇಕಾಗಿದೆ.

1992ರಲ್ಲಿ ಬಾಬರಿ ಮಸೀದಿಯ ನಾಶದಿಂದಾಗಿ ಇಡಿಯ ದೇಶ ಕೋಮುವಾದದ ದಳ್ಳುರಿಯಲ್ಲಿ ಬೇಯತೊಡಗಿತ್ತು. ಈ ಬಗ್ಗೆ ಸಂಘಟನೆಗಳು ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡವು. ಪ್ರಾರಂಭದಿಂದಲೂ ಸ್ವಾಯತ್ತ ಮಹಿಳಾ ಸಂಘಟನೆಗಳು ಅಭಿವೃದ್ಧಿ ಮಾದರಿಯ ಬಗ್ಗೆ ಮಾತನಾಡುತ್ತಲೇ ಇವೆ. ಈ ಹಂತದಲ್ಲಿ ಪ್ರಭುತ್ವದ ದೌರ್ಜನ್ಯ, ಹೊಸ ಆರ್ಥಿಕ ನೀತಿಗಳನ್ನು ವಿರೋಧಿಸಿ ಪರಿಸರ ನಾಶಕ್ಕೆ, ಸ್ಥಳಾಂತರಕ್ಕೆ ಕಾರಣವಾಗಿ ಸಾವಿರಾರು ಮಹಿಳೆಯರ ದಿನ ನಿತ್ಯದ ಬದುಕಿಗೆ ಮಾರಕವಾಗಿರುವುದರ ಮೇಲೆ ವಿಶೇಷವಾದ ಬೆಳಕು ಚೆಲ್ಲಲಾಯಿತು. ಪ್ರಭುತ್ವದ ಮೇಲೆ ರಾಜಕೀಯ ಪಕ್ಷಗಳ, ಮೂಲಭೂತವಾದಿಗಳ, ಆರ್ಥಿಕ ಕ್ರೈಸಿಸ್‌ಗಳ ಹೊರೆ, ಒತ್ತಡಗಳು ಹೆಚ್ಚಾಗುತ್ತಿರುವ ಹಾಗೆ ಪ್ರಭುತ್ವದ ಜನಪರ ಹೋರಾಟಗಳನ್ನು ಹೆಚ್ಚು ಹೆಚ್ಚು ದಮನೀಯವಾಗಿ ತುಳಿದು ಅವರನ್ನು ಅಂಚಿನ ಬದುಕಿಗೆ ಸರಿಸತೊಡಗಿದೆ.

ಪ್ರಭುತ್ವವು ಮಹಿಳೆಯರಿಗೆ ಸಂಬಂಧಪಟ್ಟ ಹಾಗೆ ಅಲ್ಲೊಂದು-ಇಲ್ಲೊಂದು ಕಾನೂನು ತಂದಿದ್ದಾಗ್ಯೂ ಕೂಡಾ ಒಟ್ಟಾಗಿ ಮಹಿಳೆಯರಿಗೆ ವಿರುದ್ಧವಾಗಿಯೇ ಕೆಲಸ ಮಾಡುವುದನ್ನು ನಾವು ಗುರುತಿಸಬಹುದಾಗಿದೆ. ಪ್ರಭುತ್ವದ ಜಾತ್ಯಾತ್ಮಕ/ವರ್ಗಾತ್ಮಕ ಗುಣಗಳು ಹೆಂಗಸರ ಸ್ಥಾನವನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗುತ್ತದೆ. ಮಹಿಳಾ ಚಳುವಳಿಯ ಧ್ವನಿಯನ್ನು ಮುರಿಯಲು ಹಾಗೂ ಹೋರಾಟದ ಧ್ವನಿಯನ್ನು ಮೆದುಗೊಳಿಸಲು ಅಲ್ಲೊಂದು/ಇಲ್ಲೊಂದು ಕಾನೂನು ಬದಲಾವಣೆ ಇದ್ದರೂ ಸಹ ದೊಡ್ಡ ಮಟ್ಟದಲ್ಲಿ ಮಹಿಳೆಯರಿಗೆ ವಿರುದ್ಧವಾಗಿರುವ ಸ್ಟೇಟ್‌ನ ಗುಣಗಳ ಹಿನ್ನೆಲೆಯಲ್ಲಿ ಸ್ವಾಯತ್ತ ಮಹಿಳಾ ಸಂಘಟನೆಗಳು ಇಂದು ಗಂಭೀರವಾಗಿ ಯೋಚಿಸಬೇಕಾಗಿದೆ. ಒಂದು ಕಡೆ ಸಾಂಕೇತಿಕವಾಗಿ ಮೂಡಿ ಬರುತ್ತಿರುವ ಹೆಣ್ಣಿನ ಪ್ರಾತಿನಿಧ್ಯತ್ವ, ಇನ್ನೊಂದೆಡೆ ಭರವಸೆಯುಳ್ಳವಳಂತೆ ಚಿತ್ರಿತವಾಗುತ್ತಿರುವ ಹೆಣ್ಣಿನ ಚಿತ್ರ, ಇನ್ನೊಂದೆಡೆ, ಸ್ತ್ರೀವಾದವನ್ನು ತಮ್ಮದನ್ನಾಗಿ ಹೊಂದಿಸಿಕೊಳ್ಳುವ ಪ್ರಯತ್ನಗಳಲ್ಲಿ ಮೂಡಿ ಬರುತ್ತಿರುವ ಹೆಣ್ಣಿನ ಚಿತ್ರಣ; ಇನ್ನೊಂದೆಡೆ ನಾನಾ ಕಾರಣಗಳಿಂದ ಅಂಚಿಗೆ ತಳ್ಳಲ್ಪಡುತ್ತಿರುವ ಸಾವಿರಾರು ಮಹಿಳೆಯರು ಇವೆರಡರ ವೈರುಧ್ಯಗಳಲ್ಲಿ ನಾವು ದುಸ್ಥಿತಿಗೆ ತಳ್ಳಲ್ಪಡುತ್ತಿರುವ ಜನರ ಧ್ವನಿಗಳಲ್ಲಿ ನಮ್ಮನ್ನು ಗುರುತಿಸಿಕೊಳ್ಳುವ ಪ್ರಯತ್ನಗಳನ್ನು ಹೆಚ್ಚು ಹೆಚ್ಚಾಗಿ ಮಾಡಬೇಕಿದೆ.

'ರಾಜಕೀಯವೆಂಬುದು ವೈಯಕ್ತಿಕ'

ಇಂದಿನ ಆರ್ಥಿಕ/ಸಾಮಾಜಿಕ ಸನ್ನಿವೇಶದಲ್ಲಿ ದಲಿತರು, ಆದಿವಾಸಿಗಳು, ಸ್ಥಳಾಂತರಗೊಂಡು ವಲಸೆ ಹೋಗುತ್ತಿರುವ ಜನರು ಹೆಚ್ಚುಹೆಚ್ಚು ಪ್ರತಿಭಟನೆ ಮಾಡುತ್ತಿರುವುದರಿಂದ, ಜನಪರ ಹೋರಾಟಗಳು ಪ್ರಬಲವಾದ ಧ್ವನಿಯನ್ನು ಮೂಡಿಸುತ್ತಿವೆ. ಹಾಗಾಗಿ ಎಲ್ಲಾ ಸಂಘಟನೆಗಳೂ ಈ ದಿಕ್ಕಿನೆಡೆ ಗಮನ ಹರಿಸುವಂತಹ ರಾಜಕೀಯ-ಸಾಂಸ್ಕೃತಿಕ ಒತ್ತಡವಿದೆ. ಹೀಗೆ ಪ್ರತಿಭಟನೆಯ ಧ್ವನಿ ಇದ್ದರೂ ಅದು ಹೋರಾಟದ ಕೇಂದ್ರಕ್ಕೆ ತಲುಪದಂತಹ ದಮನಕ್ಕೊಳಗಾದ ಗುಂಪುಗಳೂ ನಮ್ಮ ನಡುವೆ ಇವೆ. ಸೆಕ್ಸ್ ವರ್ಕ್ಸರ್ಸ್ ಆಗಿರಬಹುದು, ಲೆಸ್‌ಬಿಯನ್ ಗುಂಪುಗಳಾಗಿರಬಹುದು, ಅಥವಾ ರಾಜಕೀಯವಾಗಿ ವಲಸೆ ಬಂದ ಗುಂಪುಗಳಿರಬಹುದು.

ಅಂಚಿಗೆ ತಳ್ಳಲ್ಪಟ್ಟ ಗುಂಪಿನ ಸಂಘಟನೆಗಳೊಳಗೆ ಇಂದು ಲಿಂಗಾಧಾರಿತ ಪ್ರಶ್ನೆಗಳೂ ಹೆಚ್ಚು ಹೆಚ್ಚಾಗಿ ಕಾಣಿಸಿಕೊಳ್ಳತೊಡಗಿವೆ. ಅದು ದಲಿತರ ಹೋರಾಟವಾಗಿರಬಹುದು, ಆದಿವಾಸಿಗಳ ಹೋರಾಟಗಳಾಗಿರಬಹುದು. ಯಾವುದೇ ಹೋರಾಟವಾಗಿದ್ದರೂ ಸಹ, ಮಹಿಳೆಯರ ಅನುಭವಗಳು, ಪ್ರಶ್ನೆಗಳನ್ನು ಒಳಗೊಳ್ಳಲೇಬೇಕಾದ ಸಾಂಸ್ಕೃತಿಕ, ಚಾರಿತ್ರಿಕ ಒತ್ತಡಗಳಿವೆ. 1990ರಲ್ಲಿ ಮಹಾರಾಷ್ಟ್ರದಲ್ಲಿ ನ್ಯಾಷನಲ್ ಫೆಡರೇಶನ್ ಆಫ್ ದಲಿತ ವುಮೆನ್, ಮಹಾರಾಷ್ಟ್ರ ದಲಿತ ಮಹಿಳಾ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ಸ್ವಾಯತ್ತ ದಲಿತ ಮಹಿಳಾ ಸಂಘಟನೆಗಳು ಇಂದು ಸ್ವಾಯತ್ತ ಮಹಿಳಾ ಸಂಘಟನೆಗಳ ಬಗ್ಗೆ ಅನೇಕ ಪ್ರಶ್ನೆಗಳನ್ನು ಎತ್ತುತ್ತಿರುವುದರಿಂದ ಈ ಚರ್ಚೆಯ ಬಗ್ಗೆ ಒತ್ತು ಕೊಡಲು ಪ್ರಯತ್ನಿಸಲಾಗಿದೆ. ಸ್ವಾಯತ್ತ ಮಹಿಳಾ ಸಂಘಟನೆ ಹಾಗೂ ಸ್ವಾಯತ್ತ ದಲಿತ ಮಹಿಳಾ ಸಂಘಟನೆಗಳ ನಡುವಿನ ಸಂವಾದ ಮಹಿಳಾ ವೈಚಾರಿಕತೆಗೆ, ವಿಚಾರಧಾರೆಗೆ ಹೊಸದೊಂದು ದೃಷ್ಟಿಕೋನ ರೂಪಿಸಿಕೊಡಬಹುದು, ಹಾಗೂ ಅಂಚಿಗೆ ತಳ್ಳಲ್ಪಟ್ಟ ಗುಂಪಿನ ನಡುವೆ ಏರ್ಪಡಬೇಕಾದ ಸಂಬಂಧಗಳ ಬಗ್ಗೆ ಇದು ಒಳನೋಟ ನೀಡಬಹುದೇನೋ ಎಂಬ ಹಿನ್ನೆಲೆಯಲ್ಲಿ ಈ ಚರ್ಚೆಗಳಿಗೆ ಒತ್ತು ನೀಡಲು ಪ್ರಯತ್ನಿಸಲಾಗಿದೆ.

ದಲಿತ ಮಹಿಳೆಯರು ಜಾತಿ, ವರ್ಗ, ಲಿಂಗಾಧಾರಿತ ಶೋಷಣೆಗೆ ಒಳಗಾಗುತ್ತಿರುವುದರ ರೀತಿಯ ದೃಷ್ಟಿಕೋನಗಳು, ವೈಚಾರಿಕ ನೋಟ ಸ್ವಾಯತ್ತ ಮಹಿಳಾ ಸಂಘಟನೆಯಿಂದ ಈಗೀಗ ಮೂಡಿ ಬರತೊಡಗಿದೆ. ಜಾತಿಯೊಳಗಿನ ಪಿತೃಪ್ರಾಧಾನ್ಯತೆಯ ಹಿಡಿತ, ಜಾತಿಯ ಶೋಷಣೆ ಹಾಗೂ ದಲಿತ ಜನರ, ಜಾತಿಯ ಪಿತೃಪ್ರಾಧಾನ್ಯತೆಗೆ ಬಲಿಪಶುಗಳಾಗುತ್ತಿರುವುದರತ್ತ ಈ ಸಂಘಟನೆಗಳು ಗಮನ ಸೆಳೆಯತೊಡಗಿವೆ. ಕಾಮದ ವಿಚಾರಕ್ಕೆ ಬಂದಾಗ ಯಾರೂ ಅಸ್ಪೃಶ್ಯತೆಯನ್ನು ಆಚರಿಸುವುದಿಲ್ಲವಾದ್ದರಿಂದ ಜಾತಿಯ ದಂಗೆಗಳಲ್ಲಿ ಅವರು ಬಲಿಪಶುಗಳಾಗುತ್ತಾರೆ, ಕುಟುಂಬದ ಗಂಡಸರ ಸುಳಿವು ಪತ್ತೆಗಳಿಗಾಗಿ ಪೊಲೀಸ್ ಠಾಣೆಗಳಲ್ಲಿ ಪೊಲೀಸ್ ದೌರ್ಜನ್ಯಕ್ಕೆ ಒಳಗಾಗುತ್ತಾರೆ, ದಲಿತರ ಆಸೆ-ಆಕಾಂಕ್ಷೆಗಳಿಗಾಗಿ ದೇವದಾಸಿಗಳಾಗುತ್ತಾರೆ, ದಲಿತ ಜನಾಂಗದ ಧ್ವನಿ ಅಡಗಿಸುವುದಕ್ಕೋಸ್ಕರ ಭೂ ಒಡೆಯರಿಂದ, ಪೊಲೀಸರಿಂದ 'ಮಹಿಳೆ'ಯರನ್ನು ಹಿಂಸಿಸುವ ಮೂಲಕ ಪಾಠ ಕಲಿಸುವ ಪ್ರವೃತ್ತಿಗಳು, ದ್ವೇಷಕ್ಕಾಗಿ ಅತ್ಯಾಚಾರಕ್ಕೊಳಗಾಗುತ್ತಾರೆ, ಸಂಬಳ ಹೆಚ್ಚಿಸುವ ಹೋರಾಟಗಳನ್ನು ಅಡಗಿಸುವುದಕ್ಕಾಗಿ ಇವರ ಮೇಲೆ ದೌರ್ಜನ್ಯಗಳು ನಡೆಯುತ್ತವೆ, ಕಳೆದುಕೊಂಡ ಭೂಮಿಯನ್ನು ಪಡೆದುಕೊಳ್ಳುವ ಹೋರಾಟದಲ್ಲಿ, ಬೆಳೆಯ ಬಗೆಗಿನ ವಿವಾದಗಳಲ್ಲಿ ಹೀಗೆ ಇವರ ಮೇಲೆ ಜಾತಿ-ಸಂಬಂಧಿತ ಹಿಂಸೆ ದಲಿತ ಜಾತಿಯ ಪಿತೃಪ್ರಾಧಾನ್ಯತೆಯ ಮೌಲ್ಯಗಳಲ್ಲಿ ನಡೆಯುತ್ತಿರುತ್ತದೆ. ಈ ಶೋಷಣೆಯ ಒಟ್ಟು ಸ್ವರೂಪದ ಬಗ್ಗೆ ಇಂದು ಸ್ವಾಯತ್ತ ದಲಿತ ಮಹಿಳಾ ಗುಂಪುಗಳು ಮಾತನಾಡತೊಡಗಿವೆ. ಮಹಾರಾಷ್ಟ್ರದಲ್ಲಿ ಸ್ವಾಯತ್ತ ದಲಿತ ಮಹಿಳಾ

ಚಳುವಳಿಯಲ್ಲಿ ನಡೆಯುತ್ತಿರುವ ಚರ್ಚೆಗಳು ಸ್ವಾಯತ್ತ ಮಹಿಳಾ ಗುಂಪು, ಎಡಪಂಥೀಯ ರಾಜಕೀಯದ ಹೋರಾಟದ ನೆಲೆಗಳನ್ನು ಹಾಗೂ ದಲಿತರ ಹೋರಾಟದ ಪಿತೃಪ್ರಾಧಾನ್ಯತೆಯನ್ನು ಪ್ರಶ್ನೆ ಮಾಡತೊಡಗಿವೆ.

1980ರಲ್ಲಿ ಪೋಸ್ಟ್ ಮಾಡ್ರನಿಸ್ಟ್ ಹಾಗೂ ಪೋಸ್ಟ್ ಸ್ಟ್ರಕ್ಚರಲಿಸಂನ ಪ್ರಭಾವ ಬೆಳೆದಂತೆ ಭಾಷೆ, ಸಂಸ್ಕೃತಿ, ಸಂವಾದಗಳ ಮೇಲೆ ಹೆಚ್ಚು ಹೆಚ್ಚಾದ ಒತ್ತುಗಳು ಬೀಳ ತೊಡಗಿದವು. ರಾಜಕೀಯ, ಆರ್ಥಿಕ ಚೌಕಟ್ಟುಗಳ ವಿವರಣೆಗಳು ಹಿಂದೆ ಸರಿಯತೊಡಗಿದವು. ಏಕತೆ ಅಥವಾ ಸಾರ್ವತ್ರಿಕತೆಯ ಬದಲಾಗಿ 'ವೈವಿಧ್ಯತೆ' ಹೆಚ್ಚು ಪ್ರಾಶಸ್ತ್ಯ ಪಡೆಯಲಾರಂಭಿಸಿತು.

1985 ರಿಂದೀಚೆಗೆ ಸ್ವಾಯತ್ತ ಮಹಿಳಾ ಸಂಘಟನೆಗಳೂ ಕೂಡ 'ವೈವಿಧ್ಯತೆ', 'ಭಿನ್ನತೆ'ಯ ಮೇಲೆ ಹೆಚ್ಚು ಒತ್ತು ನೀಡಿರುವುದು ಕಂಡುಬರುತ್ತದೆ. ಅಂದರೆ ಅನೇಕ ವೈವಿಧ್ಯತೆಯುಳ್ಳ ವಿವಿಧ ಸ್ತ್ರೀವಾದಿ ದೃಷ್ಟಿಕೋನಗಳು ಒಂದರ ಪಕ್ಕ ಒಂದಿವೆ. ಇವುಗಳನ್ನು ಗುರುತಿಸುವ ಹಾಗೂ ಇವೆಲ್ಲದರ ಮಧ್ಯೆ ಒಂದು ಬಲವಾದ ಸಂಬಂಧವನ್ನು ರೂಪಿಸಬೇಕು ಎಂದು ಹೇಳಲಾಗುತ್ತಿದ್ದರೂ ಸಹ ಹೋರಾಟದ ವಿಚಾರಧಾರೆ ರೂಪಿಸಲು ಬೇಕಾದ ರಾಜಕೀಯ ದೃಷ್ಟಿಕೋನ, ವಿವರಣಾತ್ಮಕ ದೃಷ್ಟಿಕೋನ ಬೆಳೆಸಲು ಸಾಧ್ಯವಾಗಿಲ್ಲ. ಅಂದರೆ ವೈವಿಧ್ಯತೆ/ಭಿನ್ನತೆ ಎಂಬುವುಗಳು ಸಾಂಸ್ಕೃತಿಕ ಆಚರಣೆಗೆ ಕೊಡುವಷ್ಟು ಪ್ರಾಮುಖ್ಯತೆಯನ್ನು ರಾಜಕೀಯ, ವಿವರಣಾತ್ಮಕ ದೃಷ್ಟಿಕೋನಕ್ಕೆ ನೀಡುವುದಿಲ್ಲ. ಹಾಗಾಗಿ ಸಾಂಸ್ಕೃತಿಕ ಆಚರಣೆಗಳನ್ನು ವಿಜೃಂಭಿಸಿ ಹೇಳುವ ಗ್ರಹಿಕೆಗಳು ಹೆಚ್ಚು ಹೆಚ್ಚು ಬೆಳೆಯತೊಡಗಿದವು. 'ತಾಯ್ತನ'ದ ವಿಜೃಂಭಣೆ, ಹೆಂಗಸರ 'Passivity'ಯನ್ನು 'ಶಾಂತಿಯುತ' ಎಂದೂ, ಭಾವೋದ್ವೇಗವನ್ನು Nurturing ಎಂದೂ ಹೇಳುವ ದೃಷ್ಟಿಕೋನಗಳು ಬೆಳೆಯಲಾರಂಭಿಸಿದವು. ಹೆಂಗಸತ್ವವನ್ನು ಮರುವ್ಯಾಖ್ಯಾನಿಸಿ ವಿಜೃಂಭಿಸುವ ಆಚರಣೆಗಳು ಕಂಡುಬಂದವು. ರಾಜಕೀಯ ಹೋರಾಟಗಳ ಬದಲು ಭಿನ್ನತೆ, ವೈವಿಧ್ಯತೆ ಮುಖ್ಯವಾಗತೊಡಗಿದವು. ಸಮಾಜವಾದಿ ಸಮಾಜಗಳು ಕುಸಿಯುತ್ತಿದ್ದ ಹಾಗೆಯೂ ಸಹ ಈ ರೀತಿಯ ದೃಷ್ಟಿಕೋನಗಳು ಹೆಚ್ಚಾಗತೊಡಗಿದವು. ಈ ವೈವಿಧ್ಯತೆಯ ಹಿನ್ನೆಲೆಯಲ್ಲಿರುವ ಸಾಮಾಜಿಕ ಸಂಬಂಧಗಳೇನು? ಈ ಸಾಮಾಜಿಕ ಸಂಬಂಧಗಳಲ್ಲಿ ಶೋಷಣೆಯನ್ನು ಹೇಗೆ ಸಾಂಸ್ಥೀಕರಣಗೊಳಿಸಲಾಗಿದೆ ಎಂಬುದರ ವಿವರಣೆ ಇಲ್ಲಿ ಕಂಡುಬರುತ್ತಿರಲಿಲ್ಲ.

ಈ ಹಿನ್ನೆಲೆಯಲ್ಲಿ ದಲಿತ ಸ್ವಾಯತ್ತ ಮಹಿಳಾ ಸಂಘಟನೆ ಕೂಡಾ ಒಂದು ಭಿನ್ನ ಧ್ವನಿ/ಸ್ತರ ಎಂದು ಗುರುತಿಸುವ ಧೋರಣೆ ಸ್ವಾಯತ್ತ ಮಹಿಳಾ ಗುಂಪುಗಳಲ್ಲಿ ಕಂಡುಬಂತು ಎಂದು ದಲಿತ ಮಹಿಳಾ ಸಂಘಟನೆ ಆಪಾದಿಸುತ್ತದೆ. 'ವೈವಿಧ್ಯತೆ' 'ಭಿನ್ನತೆ' - ಒಂದು ರಾಜಕೀಯ ಹರವು ಇರುವ ತಾತ್ವಿಕ ದೃಷ್ಟಿಕೋನವಲ್ಲ ಇದರಿಂದ 'ಜಾತಿ' ದಲಿತ ಮಹಿಳೆಯರ ಸಮಸ್ಯೆ, ಜವಾಬ್ದಾರಿ ಮಾತ್ರ ಆಗಿಬಿಡುತ್ತದೆ. ಈ ಬಗ್ಗೆ ಸ್ವಾಯತ್ತ ಮಹಿಳಾ ಸಂಘಟನೆಗಳಲ್ಲಿ ಮೌನ ಆವರಿಸಿದೆ ಎಂದೂ ದಲಿತ ಮಹಿಳಾ ಸಂಘಟನೆಗಳು ಆಪಾದಿಸುತ್ತವೆ. ಹಾಗಾಗಿ ಸ್ವಾಯತ್ತ ದಲಿತ ಮಹಿಳಾ ಚಳುವಳಿಯು ಈ 'ವೈವಿಧ್ಯತೆ' 'ಭಿನ್ನತೆ'ಯನ್ನು ಚಾರಿತ್ರಿಕ ಹೋರಾಟದ ನೆಲೆಯಲ್ಲಿ ಇಟ್ಟು ದಲಿತ ಮಹಿಳಾ ಚಳುವಳಿಯ ಧ್ವನಿಯನ್ನು ಗುರುತಿಸಲು ಪ್ರಯತ್ನಿಸುತ್ತದೆ.

ಚರಿತ್ರೆಯಲ್ಲಿ ರಾಷ್ಟ್ರೀಯ ಹೋರಾಟದ ಜೊತೆಗಿದ್ದ ಯಾವುದೇ ಹೋರಾಟಗಳೂ ಕೂಡಾ ರಾಷ್ಟ್ರೀಯತೆಯ ಪ್ರಶ್ನೆಯ ಜೊತೆ ಒಂದಾಗಿ ಹೋಗಿರುವುದನ್ನು ಗಮನಿಸಬಹುದು. ಮಹಿಳೆಯರ ಪ್ರಶ್ನೆಯನ್ನು ರಾಷ್ಟ್ರದ ಸ್ವಾತಂತ್ರ್ಯದ ಜೊತೆ ಸಮೀಕರಿಸಿ ಮಹಿಳೆಯರನ್ನು ಇಬ್ಬಗೆಯಲ್ಲಿ ನಡೆಸಿಕೊಂಡಿತು. ಅವರಿಗೆ ಹೋರಾಟದ ಶಕ್ತಿ ಇದೆ, ಚಳುವಳಿಗಳಲ್ಲಿ ಭಾಗವಹಿಸಬೇಕು ಎನ್ನುತ್ತಲೇ, ಮನೆ, ತಾಯ್ತನ, ಸಂಸ್ಕೃತಿಯ ಪ್ರಶ್ನೆ ಬಂದಾಗ ಆಕೆ 'ಗೃಹ ದೇವತೆ'ಯಾಗಿಬಿಡುತ್ತಾಳೆ. 'ರಾಷ್ಟ್ರೀಯತೆ'ಯ ಹಿನ್ನೆಲೆಯಲ್ಲಿ ರಾಷ್ಟ್ರೀಯ ಪಿತೃಪ್ರಾಧಾನ್ಯತೆ ತನ್ನ ಪಾತ್ರವನ್ನು ಭದ್ರಪಡಿಸಿಕೊಂಡಿತು. ದಲಿತ ಮಹಿಳಾ ಚಳುವಳಿಯ ಇತಿಹಾಸವೂ ಇದಕ್ಕೆ ಭಿನ್ನವಾಗಿಲ್ಲ.

ಪೋಸ್ಟ್ ಮಾಡ್ರನಿಸ್ಟ್ ಹಾಗೂ ಪೋಸ್ಟ್ ಸ್ಟ್ರಕ್ಚರಲಿಸ್ಟ್ ದೃಷ್ಟಿಕೋನಗಳು ಪಾಶ್ಚಿಮಾತ್ಯರಿಂದ ಪ್ರಾರಂಭವಾದ ಸುಧಾರಣ ಹೋರಾಟದ ಬಗ್ಗೆ/ಮಿತಿಯ ಬಗ್ಗೆ ಮಾತನಾಡುತ್ತಿವೆ. ಈ ದೃಷ್ಟಿಯಿಂದಲೇ ಅಂಬೇಡ್ಕರ್, ಜ್ಯೋತಿಪುಲೆ ಎತ್ತಿದ ಪ್ರಶ್ನೆಗಳನ್ನು, ಮಹಿಳಾ ಪ್ರಶ್ನೆಗಳನ್ನು 'ರಾಷ್ಟ್ರೀಯತೆ'ಯ ಹೆಸರಿನಲ್ಲಿ execlude ಮಾಡಿಸಿ ಎಂದು ಸ್ವಾಯತ್ತ ದಲಿತ ಮಹಿಳಾ ಚಳವಳಿ ನುಡಿಯುತ್ತದೆ. ಅಂಬೇಡ್ಕರ್ ಚಳುವಳಿ ಪಾಶ್ಚಿಮಾತ್ಯರಿಂದ ಪ್ರೇರಿತವಾದುದು, ವಸಾಹತುಶಾಹಿಗಳಿಂದ ಪ್ರೇರಿತವಾದುದು ಎಂದು ಹಿಂದಕ್ಕೆ ತಳ್ಳಲಾಯಿತು. ಜ್ಯೋತಿ ಬಾ ಪುಲೆ ಈ ಸಂದರ್ಭದಲ್ಲಿ ಶೂದ್ರರ ಬಿಡುಗಡೆ ಕುರಿತು ತೀವ್ರವಾಗಿ ಮಾತನಾಡುತ್ತಿದ್ದರು. ಮೇಲ್ಜಾತಿ ಗಂಡಸರು ಬ್ರಾಹ್ಮಣಿಕೆಯ ಸುಧಾರಣೆ ಕುರಿತು ಮಾತನಾಡುತ್ತಿದ್ದರು.

1930ರಲ್ಲಿ ಅಂಬೇಡ್ಕರ್ ನೇತೃತ್ವದ ಚಳವಳಿಯಲ್ಲಿ ಮೊದಲ ದಲಿತ ಮಹಿಳೆಯರ ಸಮಾವೇಶ ನಡೆಯಿತು. ಈ ಪರಿಷತ್‌ನಲ್ಲಿ ಬಾಲ್ಯವಿವಾಹ, ವಿಧವಾ ಸಮಸ್ಯೆ, ವರದಕ್ಷಿಣೆ ಬ್ರಾಹ್ಮಣಿಕೆಯಿಂದ, ಅದರ ಆಚರಣೆಗಳಿಂದ ಉಂಟಾದ ಸಮಸ್ಯೆಗಳೆಂದೂ, ಇವುಗಳ ವಿರುದ್ಧ ನಿರ್ಣಯಗಳನ್ನು

ಕೈಗೊಳ್ಳಲಾಯಿತು. ಅಂಬೇಡ್ಕರ್ ಜಾತಿಯ ಶೋಷಣೆಯ ಜೊತೆಗೆ ಮಹಿಳಾ ಶೋಷಣೆಯನ್ನು ಗುರುತಿಸಿದ್ದರು. ಬಾಲ್ಯವಿವಾಹ, ಸತಿ ಪದ್ಧತಿ, ಜಾತಿ ಪದ್ಧತಿಯನ್ನು ಭದ್ರಪಡಿಸಲು, ಜಾತಿಯ ಮಿತಿಯನ್ನು ದಾಟದಿರಲು ಬ್ರಾಹ್ಮಣತ್ವದಿಂದ ರೂಪಿತ ವಾದುದೆಂದು ಅಂಬೇಡ್ಕರ್ ವಾದ ಮಾಡಿದ್ದರು.

'ಮಹಾಡ್ ಸತ್ಯಾಗ್ರಹ'ದ ಸಂದರ್ಭದಲ್ಲಿ ಅಂಬೇಡ್ಕರ್ ಜಾತಿ ಹಾಗೂ ಲಿಂಗಾಧಾರಿತ ಶೋಷಣೆಯ ಮಧ್ಯದ ಸಂಬಂಧವನ್ನು ಒತ್ತಿಹೇಳಿ ಉನ್ನತ ಮಹಿಳೆಯರ ಶುದ್ಧತೆ ಹಾಗೂ ದಲಿತ ಮಹಿಳೆಯರ ಅಶುದ್ಧತೆಯ ಬಗ್ಗೆ ಪ್ರಶ್ನಿಸಬೇಕೆಂದು ಮಹಿಳೆಯರಿಗೆ ಕರೆ ಇತ್ತರು.

ಈ ಬ್ರಾಹ್ಮಣೇತರ ಮಾದರಿಗಳ ಅಸ್ತಿತ್ವ/ಗುರುತಿಸುವಿಕೆಯ ಧ್ವನಿಗಳನ್ನು ರಾಷ್ಟ್ರದ ಇಮೇಜ್‌ನ ಪ್ರಶ್ನೆಗಾಗಿ 1930ರಲ್ಲಿ ರಾಷ್ಟ್ರೀಯ ನ್ಯಾಷನಲ್ ಕಾಂಗ್ರೆಸ್ ಈ ಧ್ವನಿಗಳನ್ನು ಸ್ತಬ್ಧಗೊಳಿಸಿತು. ಅಂಬೇಡ್ಕರ್ ನಂತರ ದಲಿತ ಮಹಿಳಾ ಚಳವಳಿ ತನ್ನ ಮಹತ್ವವನ್ನು ಕಳೆದುಕೊಂಡಿತು.

ಸ್ವಾಯತ್ತ ದಲಿತ ಮಹಿಳಾ ಸಂಘಟನೆಗಳು ತಮ್ಮಲ್ಲಿನ 'ಭಿನ್ನತೆ', 'ವೈವಿಧ್ಯತೆ' ಇತಿಹಾಸದ ಹೋರಾಟದ ಭಾಗವಾಗಿದೆ ಎನ್ನುತ್ತಾರೆ. ಇವು ಇತಿಹಾಸದಿಂದಲೂ ಬೆಳೆದುಬಂದವಾದ್ದರಿಂದ 'ಸಂಕುಚಿತ ಅಸ್ತಿತ್ವ'ಕ್ಕಾಗಿ ಇರುವ ಹೋರಾಟವೆಂದು ತಳ್ಳಿಹಾಕಲು ಸಾಧ್ಯವಿಲ್ಲ ಎನ್ನುತ್ತಾರೆ.

ಈ ದಲಿತ ಮಹಿಳಾ ಚಳುವಳಿ 1975ರಲ್ಲಿ ಬಂದ ದಲಿತ ಚಳುವಳಿಯಲ್ಲಾಗಲೀ ಅಥವಾ ಮಹಿಳಾ ಚಳುವಳಿಯಲ್ಲಾಗಲೀ ಏಕೆ ಕಾಣಿಸಿಕೊಳ್ಳಲಿಲ್ಲವೆಂಬುದು ದಲಿತ ಮಹಿಳಾ ಸಂಘಟನೆಗಳ ಪ್ರಶ್ನೆಯಾಗಿದೆ. ಅವರ ಪ್ರಕಾರ ದಲಿತ ಚಳುವಳಿ ಪುರುಷೀಕರಣ ಗೊಂಡಿದ್ದರೆ, ಮಹಿಳಾ ಚಳುವಳಿಯಲ್ಲಿ ಬ್ರಾಹ್ಮಣಿಕೆಯ ದೃಷ್ಟಿಕೋನವನ್ನು ಬಲವಾಗಿ ವಿರೋಧಿಸುವ ವೈಚಾರಿಕ ವಿವರಣೆಯೇ ಇರಲಿಲ್ಲ.

1970ರಲ್ಲಿ ದಲಿತ ಪ್ಯಾಂಥರ್ ಸಾಂಸ್ಕೃತಿಕ ಅಲೆಯನ್ನು ಬೀಸಿದರೂ ಸಹ ತಮ್ಮ ಕಾರ್ಯಕ್ರಮ ಹಾಗೂ ಬರಹಗಳ ಮೂಲಕ ಹೊಸ ಅಲೆ ಎಬ್ಬಿಸಿ ಸವಾಲುಗಳನ್ನು ಎತ್ತಿದರೂ ಸಹ ದಲಿತ ಹೆಣ್ಣಿನ ಬಗ್ಗೆ 'ತಾಯಿ' ಮತ್ತು 'ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ವ್ಯಕ್ತಿ' ಈ ಮಾದರಿಗಳಲ್ಲಿಯೇ ಹೋರಾಡಿದರೇ ವಿನಃ ಮಹಿಳೆಯರ ಶೋಷಣೆಯನ್ನು ಪ್ರಶ್ನಿಸಿ ಒಟ್ಟಾಗಿ ಹೋರಾಟ ನಡೆಸಲೇ ಇಲ್ಲ. ಹಾಗಾಗಿ ಇಲ್ಲಿ ದಲಿತರ ಪುರುಷ ಅನುಭವ ಮಾತ್ರ ಅಭಿವ್ಯಕ್ತಿ ಪಡೆದಿತ್ತು ಎಂದು ಇವರು ನುಡಿಯುತ್ತಾರೆ. ಸ್ವಾಯತ್ತ ಗುಂಪುಗಳು ವರ್ಗ/ಪಿತೃಪ್ರಾಧಾನ್ಯತೆಯನ್ನು ಪ್ರಶ್ನಿಸುವ ಮೂಲಕ 'ಹಿಂಸೆ'ಯನ್ನು ವೈಚಾರಿಕವಾಗಿ ವಿವರಿಸಿದಷ್ಟು ಬ್ರಾಹ್ಮಣಿಕೆಯನ್ನು ಪ್ರಶ್ನಿಸಲಿಲ್ಲ ಎಂದು ಸ್ವಾಯತ್ತ ದಲಿತ ಮಹಿಳಾ ಗುಂಪುಗಳು ಆರೋಪಿಸುತ್ತವೆ.

ವರದಕ್ಷಿಣೆಯ ಸಾವು/ಹಿಂಸೆಯ ಕ್ರೌರ್ಯಗಳು, ಲೈಂಗಿಕ ಹಿಡಿತಗಳು ಮೇಲ್ಜಾತಿಯ ಮಹಿಳೆಯರಲ್ಲಿ ಹೆಚ್ಚಾಗಿದ್ದರೆ, ದಲಿತ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ಸಾಮೂಹಿಕವಾದದ್ದು ಹಾಗೂ ವೈಯಕ್ತಿಕವಾಗಿ ಮತ್ತು ಸಾರ್ವಜನಿಕವಾಗಿ ಇವರು ಭಯ/ಭೀತಿ/ಹಿಂಸೆ ಅನುಭವಿಸುತ್ತಾರೆ. ಸ್ವಾಯತ್ತ ಮಹಿಳಾ ಸಂಘಟನೆಗಳು ಹೀಗೆಯೇ ಅಲ್ಲೊಂದು, ಇಲ್ಲೊಂದು ಸಮಸ್ಯೆಯ ಸುತ್ತ ಕ್ಯಾಂಪೇನ್ ಮಾಡಿವೆಯೇ ಹೊರತು ಸಾಂಸ್ಥಿಕವಾಗಿ ನಡೆಯುತ್ತಿರುವ 'ಹಿಂಸೆ'ಯ ಕುರಿತು ಅಲ್ಲ ಎಂದೂ ಕೂಡಾ ಇವರು ಆರೋಪಿಸುತ್ತಾರೆ. 'ವರದಕ್ಷಿಣೆ' ವಿಚಾರದಲ್ಲಿ ಬಂಡವಾಳಶಾಹಿ, ಪಿತೃಪ್ರಾಧಾನ್ಯತೆಯ ಮುಖಗಳನ್ನು ಗುರುತಿಸಲಾಗುತ್ತಿದೆಯೇ ಹೊರತು ಬ್ರಾಹ್ಮಣಿಕೆ/ ಅವರ ವಿವಾಹದ ರೀತಿಗಳು, ಆ ರೀತಿಗಳಿಂದಾಗಿ ಉದ್ಭವವಾಗುತ್ತಿರುವ 'ಹಣದ' ಮೋಹ ಇದರ ಬಗ್ಗೆ ಸ್ವಾಯತ್ತ ಮಹಿಳಾ ಸಂಘಟನೆಗಳು ಯಾವುದೇ ವಿಚಾರಧಾರೆ ಬೆಳೆಸಿಯೇ ಇಲ್ಲ ಎಂದು ದಲಿತ ಮಹಿಳಾ ಚಳುವಳಿ ವಾದಿಸುತ್ತಿದೆ.

ಲೈಂಗಿಕತೆ/ಲೈಂಗಿಕ ರಾಜಕೀಯ ಸಮಸ್ಯೆಗಳನ್ನು ಸ್ವಾಯತ್ತ ಸ್ತ್ರೀವಾದಿ ಸಂಘಟನೆಗಳು ಹೆಚ್ಚಾಗಿ ತೆಗೆದುಕೊಂಡಿವೆ. ಇಲ್ಲಿ ಜಾತಿ ಹಾಗೂ ಲೈಂಗಿಕ ಸಮಸ್ಯೆಗೆ ಇರುವ ಸಂಬಂಧದ ಬಗ್ಗೆ ಹೆಚ್ಚು ವೈಚಾರಿಕ ದೃಷ್ಟಿಕೋನ ಬೆಳೆಸಿಲ್ಲ. ಲೈಂಗಿಕ ರಾಜಕೀಯದಲ್ಲಿ ಜಾತಿಯ ಪ್ರಶ್ನೆ ಮಾಡದಿದ್ದರೆ, ಬ್ರಾಹ್ಮಣತ್ವವನ್ನು ಸವಾಲು ಮಾಡದಿದ್ದರೆ, ಅಂತಹ ಸ್ತ್ರೀವಾದ 'Life style' ಸ್ತ್ರೀವಾದ ಆಗಿಬಿಡುತ್ತದೆ ಎಂಬ ಬಲವಾದ ಆರೋಪವನ್ನೂ ಸಹ ದಲಿತ ಮಹಿಳಾ ಸಂಘಟನೆಗಳು ಮಾಡುತ್ತವೆ. ಲಿಂಗಾಧಾರಿತ ಸಮಸ್ಯೆಗಳನ್ನು ಸಾಂಸ್ಕೃತಿಕ ಸಮಸ್ಯೆಗಳನ್ನಾಗಿ ಮಾಡುವ ಬ್ರಾಹ್ಮಿನಿಕಲ್ ಹಿಂದುತ್ವ ನಮ್ಮಲ್ಲಿ ಬೆಳೆಯುತ್ತಿರುವ ಈ ಸಂದರ್ಭದಲ್ಲಿ ಜಾತಿ-ಲಿಂಗಾಧಾರಿತ ಸಮಸ್ಯೆಗಳನ್ನು ವಿವರಿಸುವಾಗ ಬ್ರಾಹ್ಮಣಿಕೆಯನ್ನು ಸವಾಲು ಮಾಡುವುದು ಅಗತ್ಯ ಎಂಬುದನ್ನು ದಲಿತ ಮಹಿಳಾ ಗುಂಪುಗಳು ಬಲವಾಗಿ ವಾದಿಸುತ್ತವೆ. ಬ್ರಾಹ್ಮಣತ್ವ ಒಂದು ಪಿತೃಪ್ರಾಧಾನ್ಯತೆಯನ್ನು ರೂಢಿಸಿಲ್ಲ. ಹಲವಾರು ಪಿತೃಪ್ರಾಧಾನ್ಯತೆಯನ್ನು ಹುಟ್ಟುಹಾಕಿದೆ.

ಹಲವಾರು ಪಿತೃಪ್ರಾಧಾನ್ಯತೆಗಳು ಬ್ರಾಹ್ಮಣತ್ವದ Conspiracyಯಿಂದಾಗಿ ಹಾಗೂ ಉತ್ಪಾದನೆಗೆ ಸಂಬಂಧಿಸಿದಂತೆ ಇತರ ಜಾತಿಯ Conspiracyಯಿಂದಾಗಿ ಹುಟ್ಟಿಕೊಂಡಿವೆ. ಹಾಗಾಗಿ 'ಜಾತಿ' ಲಿಂಗಾಧಾರಿತ ಪ್ರಶ್ನೆಯಲ್ಲಿ ಪ್ರಮುಖ ಪಾತ್ರ

ವಹಿಸುತ್ತದೆ ಎನ್ನುವುದು ದಲಿತ ಮಹಿಳೆಯರ ವಾದ. 1996ರಲ್ಲಿ ವಿಕಾಸ್ ವಂಚಿತ್ ಧಲಿತ ಮಹಿಳಾ ಪರಿಷತ್‌ನಲ್ಲಿ 'ಡಿಸೆಂಬರ್ 25'ನ್ನು ಮಹಿಳಾ ದಿನವನ್ನಾಗಿ ಆಚರಿಸಬೇಕು ಎಂಬ ಸಲಹೆ ಯನ್ನೂ ಮುಂದಿಡಲಾಯಿತು.

ಈ ದಲಿತ ಸ್ವಾಯತ್ತ ಸಂಘಟನೆಯ ಬಗ್ಗೆ ಟೀಕೆಗಳೂ ಇವೆ. 'ಸ್ವಾಯತ್ತತೆ' ಎನ್ನುವ ಕಲ್ಪನೆಯನ್ನೇ ಇತ್ತೀಚೆಗೆ ಹೆಚ್ಚುಹೆಚ್ಚಾಗಿ ಪ್ರಶ್ನೆ ಮಾಡಲಾಗುತ್ತಿದೆ. ಬೆಳೆಯುತ್ತಿರುವ ಹಿಂದುತ್ವ ಹಾಗೂ ಆರ್ಥಿಕ ಬೆಳವಣಿಗೆಗಳಲ್ಲಿ 'ಸ್ವಾಯತ್ತತೆ'ಯ ಕಲ್ಪನೆಯಿಂದ ಹೋರಾಟ ನಡೆಸಲು ಸಾಧ್ಯವೇ ಎನ್ನುವ ಪ್ರಶ್ನೆಗಳು ದಲಿತ ಹಾಗೂ ಸ್ವಾಯತ್ತ ಮಹಿಳಾ ಗುಂಪುಗಳೆರಡೂ ಎದುರಿಸು ತ್ತಿರುವ ಪ್ರಶ್ನೆಗಳು. ಯಾವುದೇ ಸ್ವಾಯತ್ತ ಅಸ್ತಿತ್ವಕ್ಕೋಸ್ಕರ ಹುಟ್ಟಿಕೊಂಡದ್ದು, ಅಥವಾ ಅನುಭವಕ್ಕೆ ಮಾತ್ರ ಸೀಮಿತವಾದದ್ದು ಎಂದು ಹೇಳಿದರೆ ಅದು ಆ ಗುಂಪುಗಳ ಹೋರಾಟವನ್ನು ನಿರ್ಲಕ್ಷಿಸಿದ ಹಾಗೆ ಆಗುತ್ತದೆ.

ದಲಿತ ಸ್ವಾಯತ್ತ ಮಹಿಳಾ ಗುಂಪನ್ನು ನಿಯೋ-ಬುದ್ಧರ ಗುಂಪೆಂದು ಆಪಾದಿಸಲಾಗಿದ್ದು, ದಲಿತ ಮಧ್ಯಮ ವರ್ಗದ ನಾಯಕತ್ವ ಇಲ್ಲಿ ಬೆಳೆಯುತ್ತಿದೆ ಎಂದೂ ಆಪಾದಿಸಲಾಗುತ್ತಿದೆ.

ದಲಿತ ಮಹಿಳಾ ಸಂಘಟನೆ ಬರಿಯ ಬ್ರಾಹ್ಮಣಿಕೆಯ ಸಂಕೇತಗಳ ವಿರುದ್ಧ ಮಾತ್ರ ಹೋರಾಡಿದರೆ ಸಾಲದು. ಸಾವಿರಾರು ದಲಿತ ಮಹಿಳೆಯರು ಭೂಮಿಗಳ ನಾಶದಿಂದಾಗಿ ತಮ್ಮ ನಿತ್ಯಜೀವನದ ಆರ್ಥಿಕ ಸಂಪನ್ಮೂಲಗಳನ್ನು ಕಳೆದು ಕೊಳ್ಳುತ್ತಿದ್ದಾರೆ. ಸ್ವಾಯತ್ತ ಮಹಿಳಾ ಚಳುವಳಿ ಪರಿಸರಕ್ಕೆ ಸಂಬಂಧಿಸಿದ ಹೋರಾಟಗಳ ಬಗ್ಗೆ ಸಕ್ರಿಯ ಪಾತ್ರ ವಹಿಸುತ್ತದೆ. ದಲಿತ ಮಹಿಳಾ ಚಳುವಳಿ ಪರಿಸರವಾದಿ ಫೆಮಿನಿಸ್ಟ್ ಚಳುವಳಿಗಳು ಮಾಡಿರುವ ಕೆಲಸವನ್ನು ನಿರ್ಲಕ್ಷಿಸಬಾರದು ಎನ್ನುತ್ತಾರೆ.

ಜಾಗತೀಕರಣ ಎಲ್ಲಾ ರೀತಿಯ ಅಂಚಿಗೆ ತಳ್ಳಲ್ಪಟ್ಟ ಜನರನ್ನು ಕಡಿಮೆ ಸಂಬಳದಲ್ಲಿ ದುಡಿಸಿಕೊಳ್ಳುತ್ತಿದೆ. ಖಾಸಗೀಕರಣ ಇದಕ್ಕೆ ಉತ್ತರವಲ್ಲ. ಸಮುದಾಯದ ನಿಯಂತ್ರಣ, ಸ್ಥಳೀಯ ಮಾರ್ಕೆಟ್ ಉತ್ತಮಗೊಳಿಸುವುದು ಇಂತಹ ಉತ್ತರಗಳನ್ನೂ ನಾವು ಹುಡುಕಬೇಕಿದೆ. ಸಾಂಸ್ಕೃತಿಕ ಸಂಘರ್ಷ ಮುಖ್ಯವಾದುದು. ಆದರೆ ಇದು ರಾಜಕೀಯ ನೆಲೆಯಲ್ಲಿಯೇ ನಡೆಯಬೇಕಾದುದು ಅನಿವಾರ್ಯವಾಗಿದೆ. ಅಂದರೆ ಇಂದು ಬರುತ್ತಿರುವ 'ಅಭಿವೃದ್ಧಿ ಮಾದರಿ'ಗಳನ್ನು ಕುರಿತು ನಾವು ಮಾತನಾಡಲೇಬೇಕಿದೆ.

ದಲಿತ ಮಹಿಳಾ ಚಳುವಳಿ ಈಗಿರುವ ರಾಜಕೀಯ ಸನ್ನಿವೇಶದಲ್ಲಿ ಬಾರ್ಗೇನ್ ಮಾಡುವುದನ್ನು ಒಪ್ಪಿಕೊಳ್ಳುತ್ತಾರೆ. ಅಂದರೆ ಚುನಾವಣೆಯ ಸಂದರ್ಭದಲ್ಲಿ ಸೀಟ್‌ಗಳಿಗಾಗಿ ಚೌಕಾಸಿ ಮಾಡುವುದು. 'ಮಹಿಳಾ ಮೀಸಲಾತಿ' ಬಿಲ್ OBCಗೆ ಕೂಡಾ ಬೇಕು ಎನ್ನುವುದರಲ್ಲಿ ಯಾರಿಗೂ ವಿರೋಧವಿಲ್ಲ. ಆದರೆ OBC ಕೋಟಾ ಇಲ್ಲದೇ ಹೋದರೆ 'ಮಹಿಳಾ ಮೀಸಲಾತಿ' ಜಾರಿಗೆ ಬರಲೇಬಾರದೇ ಎನ್ನುವುದರ ಬಗ್ಗೆ ಮಹಿಳಾ ಚಳುವಳಿ ಹಾಗೂ ದಲಿತ ಮಹಿಳಾ ಚಳುವಳಿ ಯೋಚಿಸಬೇಕಾಗುತ್ತದೆ. ಈಗಿರುವ ಸನ್ನಿವೇಶದಲ್ಲಿ ಎಲ್ಲಾ ಮಹಿಳೆಯರೂ ರಾಜಕೀಯ ದಾಳವಾಗುತ್ತಿದ್ದಾರೆ. 'ಮಹಿಳಾ ಮೀಸಲಾತಿ' ಹಾಗೂ 'ಸಮಾನ ನಾಗರೀಕ ಸಂಹಿತೆ' ಎರಡೂ ಸಮಸ್ಯೆಗಳಲ್ಲಿ ಮಹಿಳೆಯರನ್ನು ಸಬಲಗೊಳಿಸುವುದಕ್ಕಿಂತ ಹೆಚ್ಚಾಗಿ ತಮ್ಮ ಮೇಲೆ ಅವಲಂಬನೆ ಹೆಚ್ಚಿಸಿಕೊಳ್ಳುವುದಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಪಿತೃಪ್ರಾಧಾನ್ಯತೆ ಹೊಸ ಹೊಸ ಬಗೆಯಿಂದ ತನ್ನ ತಲೆ ತೂರಿಸುತ್ತಿದೆ ಎಂಬುದನ್ನು ಕೂಡಾ ನಾವು ನೆನಪಿನಲ್ಲಿಡಬೇಕಾಗುತ್ತದೆ.

ಅಂಚಿಗೆ ತಳ್ಳಲ್ಪಟ್ಟವರ, ದಮನಕ್ಕೊಳಗಾಗುತ್ತಿರುವವರ ನಿತ್ಯಜೀವನದ ಸವಲತ್ತುಗಳಿಗೆ ಪರ್ಯಾಯ ಅಭಿವೃದ್ಧಿ ಮಾದರಿಗಳು ಇಂದು ನಮಗೆ ಬೇಕಿವೆ. ಇದರ ಬಗ್ಗೆ ಸ್ವಾಯತ್ತ/ದಲಿತ ಎಲ್ಲಾ ಮಹಿಳಾ ಚಳುವಳಿಗಳೂ ಧ್ವನಿ ಎತ್ತಬೇಕಿದೆ. ಚಾರಿತ್ರಿಕವಾಗಿ ದಲಿತ ಮಹಿಳೆಯರು ನಾಯಕತ್ವ ವಹಿಸಬೇಕು ಎಂದು ಹೇಳುವ ಮಹಿಳಾ ಗುಂಪುಗಳೂ ಸಹ ದಲಿತ ಮಹಿಳಾ ಚಳುವಳಿ ಎತ್ತಬೇಕಾದ ಪ್ರಶ್ನೆಗಳತ್ತ ಗಮನ ಸೆಳೆದರೂ ತಮ್ಮ ರಾಜಕೀಯ ವಿಷನ್ ಮಾತ್ರ ಬದಲಾಯಿಸಿಕೊಂಡಿಲ್ಲ ಎಂದು ದಲಿತ ಮಹಿಳಾ ಚಳುವಳಿ ಆಪಾದಿಸುತ್ತದೆ.

ಡಿಸೆಂಬರ್ 25ನ್ನು ಭಾರತೀಯರ ಸ್ತ್ರೀ ಮುಕ್ತಿ ದಿನವನ್ನಾಗಿ ಆಚರಿಸುವ ಬಗ್ಗೆ ಎಡಪಂಥೀಯ ಒಲವುಳ್ಳ ಸ್ತ್ರೀ ಸಂಘಟನೆಗಳು ಒಪ್ಪುವುದಿಲ್ಲ.

ಜೊತೆಗೆ ಸ್ವಾಯತ್ತ ಮಹಿಳಾ ಸಂಘಟನೆ ಇಂದು ಮರು ಆಲೋಚನೆ ಮಾಡಬೇಕಿದೆ. ಅಂಚಿಗೆ ತಳ್ಳಲ್ಪಟ್ಟ ಮಹಿಳೆಯರ ಹೋರಾಟದ ದೃಷ್ಟಿಕೋನವನ್ನು ವೈವಿಧ್ಯತೆ/ಭಿನ್ನತೆ ಎನ್ನುವುದಕ್ಕಿಂತ ಒಂದು ರಾಜಕೀಯ ದೃಷ್ಟಿಕೋನವನ್ನಾಗಿಸಿ, ವಿಚಾರಧಾರೆಯಾಗಿಸಿ ಹೋರಾಟಗಳನ್ನು ರೂಪಿಸುವತ್ತ, ಹೋರಾಟಗಳ ಜೊತೆ ದುಡಿಯುವತ್ತ ನಮ್ಮನ್ನು ತೊಡಗಿಸಿಕೊಳ್ಳುವುದು ಇಂದಿನ ಸಂದರ್ಭದಲ್ಲಿ ಅಗತ್ಯವಾಗಿದೆ.

'ದಲಿತ ವಿಮೆನ್ ಟಾಕ್‌'ಡಿಫಿರೆಂಟಲೀ' - ಶರ್ಮಿಳ ರೇಜ್, E.P.W. Oct. 31, 1998 'ವಾನ್-ಬ್ರಾಹ್ಮಿನ್ ರೆಂಡರಿಂಗ್ಸ್ ಆಫ್ ಫೆಮಿನಿಸಂ - ಛಾಯಾದತ್ತರ್, 8.p.w. Oct. 9, 1999

'ಸಹೇಲಿ' ಜನವರಿ 2000 ಇವುಗಳನ್ನು ಆಧರಿಸಿ ಈ ಲೇಖನ ಬರೆಯಲಾಗಿದೆ.

ತಂತ್ರಜ್ಞಾನ ಬದಲಾವಣೆ ಮತ್ತು ಕೈಗಾರಿಕಾ ಮಹಿಳಾ ಕಾರ್ಮಿಕರು

('ಜೆಂಡರ್ ಅಂಡ್ ಪಾಲಿಟಿಕ್ಸ್ ಇನ್ ಇಂಡಿಯಾ'; ಸಂಪಾದಕಿ : ನಿವೇದಿತಾ ಮೆನನ್; ಪ್ರಕಾಶಕರು : ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1999 - ಈ ಪುಸ್ತಕದಲ್ಲಿ "ಕೈಗಾರಿಕಾ ಮಹಿಳಾ ಕಾರ್ಮಿಕರ ಮೇಲೆ ತಂತ್ರಜ್ಞಾನ ಬದಲಾವಣೆಯ ಪರಿಣಾಮ" ಕುರಿತಂತೆ ರೋಹಿಣಿ ಹೆನ್ಸ್‌ಮನ್ ಬರೆದಿರುವ ಪ್ರಬಂಧವನ್ನು ಈ ಲೇಖನದಲ್ಲಿ 'ಮಾನಸ'ಕ್ಕಾಗಿ ವಿಶ್ಲೇಷಿಸಿದ್ದಾರೆ ನೀಲಾಂಜನ)

90ರ ದಶಕದಲ್ಲಿ ಸ್ವರೂಪಾತ್ಮಕ ಹೊಂದಾಣಿಕೆಯ ಕಾರ್‍ಯಕ್ರಮಗಳೊಂದಿಗೆ (ಸ್ಟ್ರಕ್ಚರಲ್ ಅಡ್ಜಸ್ಟ್‌ಮೆಂಟ್ ಪ್ರೋಗ್ರಾಂ) ಭಾರತೀಯ ಅರ್ಥವ್ಯವಸ್ಥೆಯ ಜಾಗತೀಕರಣ, ಕೆಲಸದ ಸ್ವರೂಪವನ್ನೇ ತೀವ್ರವಾಗಿ ಬದಲಿಸಿದೆ. ಅದರಲ್ಲೂ ಮಹಿಳಾ ಕಾರ್ಮಿಕ ಕ್ಷೇತ್ರದ ಮೇಲಿನ ಪರಿಣಾಮವಂತೂ ತೀವ್ರತರವಾದ್ದು. ಸ್ವರೂಪಾತ್ಮಕ ಹೊಂದಾಣಿಕೆ ಕಾರ್ಯಕ್ರಮದಿಂದ ಕಾರ್ಮಿಕ ಕ್ಷೇತ್ರದಲ್ಲಿ ಹೆಚ್ಚಿನ ಮಹಿಳೆಯರ ಪಾಲ್ಗೊಳ್ಳುವಿಕೆಗೆ, ಮಹಿಳೆಯರಿಗೆ ಹೆಚ್ಚಿನ ಉದ್ಯೋಗಾವಕಾಶಗಳಿಗೆ ಕಾರಣವಾಗುತ್ತದೆ ಎಂದು ವಾದಿಸಲಾಗುತ್ತದೆ. ಆದರೆ ತಂತ್ರಜ್ಞಾನಗಳ ಬಳಕೆ ಹೆಚ್ಚಾದಂತೆ, ಮಹಿಳೆಯರಿಗೆ ಉದ್ಯೋಗಾವಕಾಶ ಇಳಿಮುಖವಾಗುತ್ತಿರುವುದು ಹಾಗೂ ಅಸಂಘಟಿತ ವಲಯದಲ್ಲಿ ಮಹಿಳಾ ಕಾರ್ಮಿಕರು ಹೆಚ್ಚುತ್ತಿರುವುದು ಗೋಚರವಾಗುತ್ತಿದೆ.

ಯಾಂತ್ರಿಕೀಕರಣ ಹಾಗೂ ಹೊಸ ತಂತ್ರಜ್ಞಾನಗಳ ಬಳಕೆಗೆ ಮಹಿಳಾ ಹೋರಾಟದ ಪ್ರತಿಕ್ರಿಯೆ ಏನಾಗಿರಬೇಕು? ಕೈಗಾರಿಕಾ ಮಹಿಳಾ ಕಾರ್ಮಿಕರ ಮೇಲೆ ತಾಂತ್ರಿಕ ಬದಲಾವಣೆ ಬೀರಿರುವ ಪರಿಣಾಮಗಳ ಮೇಲೆ ರೋಹಿಣಿ ಹೆನ್ಸ್‌ಮನ್ ಬರೆದಿರುವ ಪ್ರಬಂಧವನ್ನು ಈ ಲೇಖನ ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದೆ.

ಕೈಗಾರಿಕಾ ಮಹಿಳಾ ಕಾರ್ಮಿಕರ ಮೇಲೆ ತಾಂತ್ರಿಕ ಬದಲಾವಣೆಯ ಪರಿಣಾಮ ಕುರಿತಂತೆ ರೋಹಿಣಿ ಹೆನ್ಸ್‌ಮನ್‌ರ ಪ್ರಬಂಧ ಎರಡು ಮುಖ್ಯ ಪ್ರಶ್ನೆಗಳನ್ನು ಎತ್ತುತ್ತದೆ : ಹೊಸ ತಂತ್ರಜ್ಞಾನಗಳಿಂದ ಮಾನವೀಯ ಆಯ್ಕೆಗಳು ಹೆಚ್ಚುತ್ತವೆಯೇ ಅಥವಾ ಸೀಮಿತಗೊಳ್ಳುತ್ತದೆಯೇ? ಆರ್ಥಿಕ ವಿಸ್ತರಣೆ ಉದ್ಯೋಗ ಹೆಚ್ಚಳದ ಅಥವಾ ಉದ್ಯೋಗ ನಷ್ಟದ ಬೆಳವಣಿಗೆಗೆ ಕಾರಣವಾಗುತ್ತಿದೆಯೆ?

ತಂತ್ರಜ್ಞಾನ ಆವಿಷ್ಕಾರಗಳಿಗಿಂತ ಮುಂಚಿನ ಶ್ರಮ ವಿಭಜಿತ ಸಮಾಜದಲ್ಲಿ ಮಹಿಳಾ ಕಾರ್ಮಿಕರ ಸ್ಥಿತಿಗತಿ ಪರಿಶೀಲನೆಯೊಂದಿಗೆ ರೋಹಿಣಿ ಆರಂಭಿಸುತ್ತಾರೆ.

ಕೆಲವು ಕೈಗಾರಿಕೆಗಳಲ್ಲಿ ಉದಾಹರಣೆಗೆ ಆಹಾರ, ಜವಳಿ, ಎಲೆಕ್ಟ್ರಾನಿಕ್ಸ್ ಕ್ಷೇತ್ರಗಳಲ್ಲಿ ಮಹಿಳಾ ಕಾರ್ಮಿಕರು ಸಿಂಹಪಾಲು ಹೊಂದಿದವರಾಗಿದ್ದಾರೆ. ಆದರೆ ಉಕ್ಕು, ಯಂತ್ರೋಪಕರಣ ಮತ್ತಿತರ ಭಾರಿ ಕೈಗಾರಿಕೆಗಳಲ್ಲಿ ಮಹಿಳೆಯ ಹೆಸರಿರುವುದೇ ಕಷ್ಟ. ಅವರು ಸಿಂಹಪಾಲು ಹೊಂದಿರುವ ಕ್ಷೇತ್ರಗಳಲ್ಲೂ, ಅವರ ಕಾರ್ಯ ಅರೆ ಕುಶಲ ಕೆಲಸ, ಅಥವಾ ಯಾವುದೇ ಕೌಶಲ ಅಥವಾ ಯಂತ್ರೋಪಕರಣ ಅಗತ್ಯವಿಲ್ಲದಂತಹ ಕೌಶಲ ರಹಿತ ಕೆಲಸಗಳು-ಸ್ವಚ್ಛತೆ, ಪ್ಯಾಕಿಂಗ್, ತಪಾಸಣೆ, ಹೊಲಿಯುವುದು, ಜೋಡಣೆಯ ಕಾರ್ಯ ಇತ್ಯಾದಿಗಳಿಗೆ ಸೀಮಿತವಾಗಿರುತ್ತದೆ.

ಈ ಲಿಂಗಾಧಾರಿತ ಶ್ರಮ ವಿಭಜನೆ ಸಾಮಾಜಿಕ ವಿಭಜನೆ ಎಂಬುದು ಸ್ಪಷ್ಟ. ದೇಶದಿಂದ ದೇಶಕ್ಕೆ, ಔಪಚಾರಿಕದಿಂದ ಅನೌಪಚಾರಿಕ ವಲಯದವರೆಗೆ, ಒಂದು ಕಾಲದ ಅವಧಿಯಿಂದ ಮತ್ತೊಂದಕ್ಕೆ ಇದರಲ್ಲಿ ಭಾರೀ ಅಂತರವಿರುತ್ತದೆ. ಮುಖ್ಯವಾಗಿ ಮಹಿಳೆಯರು ಮಾಡುವ ಕೆಲಸ ಕಡಿಮೆ ಕೌಶಲದ್ದು ಮತ್ತು ಕಡಿಮೆ ಮೌಲ್ಯದ್ದು ಎಂದು ವರ್ಗೀಕರಿಸುವ ಸಂದರ್ಭದಲ್ಲಿ ಈ ವಿಭಜನೆ ಬಂದಿದೆ. ಅಲ್ಲದೆ ಸಮಾನ ಮೌಲ್ಯದ ಕೆಲಸಕ್ಕೆ ಸಮಾನ ವೇತನ ಎಂಬುದಕ್ಕಾಗಿ ಎಂದೂ ಹೋರಾಟದ ಸಂದರ್ಭದಲ್ಲಿ ಈ ವಿಭಜನೆ ಬಂದಿದೆ.

ಸಮ್ಮಾನ ವೇತನ ಶಾಸನವಿದ್ದರೂ, ಕೈಗಾರಿಕಾ ಕಾರ್ಮಿಕರಾಗಿ ಮಹಿಳೆಯರು ಪುರುಷರಿಗಿಂತ ಕಡಿಮೆ ಸಂಪಾದಿಸುತ್ತಿದ್ದಾರೆ. ಏಕೆಂದರೆ ಅವರುಗಳ ಕಾರ್ಮಿಕ ಸಂಘಗಳು ಸಮಾನ ವೇತನಕ್ಕಾಗಿ ಹೋರಾಡಿಲ್ಲ, ಅಥವಾ ಅವರ ಉದ್ಯೋಗಗಳು ಶೋಷಣೆಯಿಂದ ಕೂಡಿ ಅಸಂಘಟಿತ ವಲಯಕ್ಕೆ ಸೇರಿದಂತಹವು; ಅಥವಾ ಕಡಿಮೆ ಮೌಲ್ಯದ ಕೆಲಸ ನಿರ್ವಹಿಸುವ ಒತ್ತಡಕ್ಕೆ ಅವರು ಒಳಪಟ್ಟಿರಬಹುದು. ಮಹಿಳೆಯರನ್ನು ಪುರುಷರಿಗಿಂತ ಕಡಿಮೆ ಪರಿಣಾಮಕಾರಿ ವೇತನ ಗಳಿಕೆದಾರರೆಂದು ಪರಿಭಾವಿಸಲಾಗುತ್ತದೆ. ಅವರಿಗೆ ಹೆಚ್ಚಿನ ಹಣದ ಅಗತ್ಯವಿಲ್ಲ ಎಂಬುದು ಒಂದು ಭಾವನೆ. ಆದರೆ ಪುರುಷನಿಗೆ ತನ್ನದೇ ಅಗತ್ಯಗಳಾದ ತಂಬಾಕು ಅಥವಾ ಮದ್ಯಕ್ಕೆ ತನ್ನ ಆದಾಯ ಖರ್ಚುಮಾಡುವ ಪ್ರವೃತ್ತಿಗಳಿದ್ದರೆ ಹೆಚ್ಚುಹೆಚ್ಚು

ಮಹಿಳೆಯರು ತಂತಮ್ಮ ಮನೆಗಳನ್ನು ತಾವೇ ಸ್ವತಃ ಏಕಾಂಗಿನಿಯರಾಗಿ ನಡೆಸುತ್ತಿರುವುದಕ್ಕೆ ಸಾಕಷ್ಟು ಉದಾಹರಣೆಗಳಿದ್ದು ಈ ಭಾವನೆಯನ್ನು ಸುಳ್ಳು ಮಾಡುತ್ತದೆ.

ಗೃಹಕೃತ್ಯ ಕಾರುಭಾರು ಮಹಿಳೆಯದೇ ಹೊಣೆಗಾರಿಕೆ ಎಂದು ಪರಿಗಣಿಸಲಾಗುತ್ತದೆ. ಇದೂ ಮಹಿಳೆಯ ಮೇಲೆ ಹೇರಲ್ಪಟ್ಟ ಸಾಮಾಜಿಕ ಶ್ರಮ ವಿಭಜನೆ. ಏಕೆಂದರೆ ಮನೆಗೆಲಸಗಳು ಗೃಹ ಅರ್ಥವ್ಯವಸ್ಥೆಗೆ ಒಳಪಡುತ್ತದೆ. ಇದರಿಂದ ಮತ್ತೆ ಏನೂ ಲಾಭವಿಲ್ಲ ಎಂದು ಪರಿಗಣಿಸಲಾಗುತ್ತದೆ. ಇದರ ಹಿಂದೆ ಕೆಲಸ ಮಾಡುವ ಸಿದ್ಧಾಂತ ಎಂದರೆ ಮತ್ತೆ ಮಹಿಳೆಯರು ವೇತನ ರಹಿತ ಉದ್ಯೋಗಕ್ಕೆ ಸರಿಯಾದವರು ಅವರಿಗೆ ಹೆಚ್ಚಿನ ಹಣ ಅಗತ್ಯವಿಲ್ಲ ಎಂಬುದು. ಆದರೆ ವಾಸ್ತವ ಏನೆಂದರೆ, ಲಕ್ಷಾಂತರ ಮಹಿಳೆಯರು ವೇತನ ಸಹಿತ ಕೆಲಸದ ಜೊತೆಗೆ ಮನೆಗೆಲಸಗಳನ್ನು ಮಾಡುವುದರಿಂದ ದಿನಕ್ಕೆ 18 ಗಂಟೆಗಳು ಅಥವಾ ಅದಕ್ಕಿಂತ ಹೆಚ್ಚಿನ ಗಂಟೆಗಳ ದುಡಿಮೆ ಅವಶದಾಗಿರುತ್ತದೆ. ಇದರಿಂದ ಸುಸ್ತು-ಅನಾರೋಗ್ಯಗಳಿಗೂ ಕಾರಣವಾಗುವುದುಂಟು.

ಈ ಎಲ್ಲಾ ಸಿದ್ಧಾಂತಗಳೂ ಪರಸ್ಪರ ಸಂಬಂಧಿಸಿದ್ದು ಎಂದು ರೋಹಿಣಿ ಪ್ರತಿಪಾದಿಸುತ್ತಾರೆ. ವೇತನ ರಹಿತ ಗೃಹಕೃತ್ಯ ನಿರ್ವಹಣೆಗೆ ಮಹಿಳೆಯರು ಲಾಯಕ್ಕಾದವರು ಅವರೇ ಅದೆಲ್ಲವನ್ನೂ ನಿರ್ವಹಿಸಬೇಕೆಂದು ಭಾವಿಸಿದರೆ, ಸಾಮಾನ್ಯವಾಗಿ ಮಹಿಳೆಯರು ಪುರುಷರಿಗಿಂತ ಅಷ್ಟೇನೂ ಪರಿಣಾಮಕಾರಿಯಲ್ಲದ ವೇತನ ಗಳಿಕೆದಾರರು. ಎಷ್ಟೇ ಕಷ್ಟಪಟ್ಟು ದುಡಿದರೂ ಮನೆಯಲ್ಲಿ ಹೆಚ್ಚಿನ ಮನೆಗೆಲಸದ ಹೊರೆಯನ್ನು ಹೊರಬೇಕಿರುವುದರಿಂದ ಪುರುಷರಿಗೆ ಸರಿಸಾಟಿಯಾಗುವಂತಹವರಲ್ಲ. ಸಮಾನ ವೇತನ ಶಾಸನದ ಮೂಲಕ ಸಮಾನ ಕೆಲಸಕ್ಕೆ ಸಮಾನ ವೇತನ, ಹೆರಿಗೆ ರಜೆ ಸೌಲಭ್ಯ, ಸಮಾನ ಶಿಕ್ಷಣ, ತರಬೇತಿ ಅವಕಾಶಗಳನ್ನು ನೀಡಲಾಗಿದ್ದರೂ, ಪುರುಷರಿಗೆ ಹೋಲಿಸಿದರೆ ಮಹಿಳೆಯರದು ಅನಾನುಕೂಲ ಸ್ಥಿತಿಯೇ ಎಂದು ರೋಹಿಣಿ ವಾದಿಸುತ್ತಾರೆ.

ಈ ಪ್ರಬಂಧ ನಂತರ ಸಧ್ಯಕ್ಕೆ ಈಗಿರುವ ಕೆಲಸದ ಸ್ಥಿತಿಗತಿಗಳನ್ನು ಚರ್ಚಿಸುತ್ತದೆ. ಮೊದಲನೆಯದಾಗಿ ಯುದ್ಧಾನಂತರದ ಬ್ರಿಟನ್‌ನಲ್ಲಿಯಂತೆ ಕಾರ್ಮಿಕರ ಅಭಾವದ ದಿನಗಳಲ್ಲಿ ಬಾಲವಾಡಿ ಹಾಗೂ ಹೆರಿಗೆ ರಜೆ ಸೌಲಭ್ಯಗಳು ಮಹಿಳೆಯರಿಗೆ ನೀಡುವಂತಹ ಸೂಕ್ಷ್ಮ ಸೌಲಭ್ಯಗಳು-ಇವುಗಳನ್ನು ಅನಂತರ ವಾಪಸ್ ಪಡೆಯಲಾಗುತ್ತದೆ. ಭಾರತದಲ್ಲಿ ಸಂಘಟಿತ ವಲಯದಲ್ಲಿ ಮಹಿಳೆಯರನ್ನೇ ನೇಮಕ ಮಾಡಿಕೊಳ್ಳದೆ ಈ ಶಾಸನಾತ್ಮಕ ಸುರಕ್ಷೆಗಳನ್ನು ಗಾಳಿಗೆ ತೂರಲಾಗುತ್ತದೆ. ಅಥವಾ ಬೀಡಿ ಉದ್ಯಮವನ್ನು ಯಾವುದೇ ಶಾಸನಾತ್ಮಕ ರಕ್ಷಣೆಗಳಿಲ್ಲದಂತಹ ಅಸಂಘಟಿತ ವಲಯಕ್ಕೆ ಉತ್ಪಾದನೆಯನ್ನೇ ಸ್ಥಳಾಂತರಿಸಲಾಗುತ್ತದೆ. ಈ ವಲಯದಲ್ಲಿ ಹೆರಿಗೆ ಅಥವಾ ಶಿಶುಪಾಲನೆಗೆ ಸಂಬಂಧಿಸಿದಂತೆ ಯಾವುದೇ ಶಾಸನಾತ್ಮಕ ರಕ್ಷಣೆಗಳಿಲ್ಲದಂತಹ ವಾತಾವರಣದಲ್ಲಿ ಶೇಕಡಾ 90ರಷ್ಟು ಮಹಿಳಾ ಕಾರ್ಮಿಕಶಕ್ತಿ ಕೇಂದ್ರೀಕೃತವಾಗಿದ್ದು ಮಹಿಳಾ ಕಾರ್ಮಿಕರು ಗೃಹಕೃತ್ಯ ಹಾಗೂ ವೈಯಕ್ತಿಕ ಒತ್ತಡಗಳಲ್ಲಿ ಬಳಲುತ್ತಾರೆ. ಮಹಿಳಾ ಕಾರ್ಮಿಕರಿಗೆ ಶಾಸನಾತ್ಮಕ ರಕ್ಷಣೆ ನೀಡುವ ಆದರ್ಶಮಯ ವಾತಾವರಣದಲ್ಲೂ, ಅವರ ಉದ್ಯೋಗ ಸ್ಥಾನಮಾನ-ಬೆಳವಣಿಗೆಗೆ ಗೃಹ ಕ್ಷೇತ್ರದಲ್ಲಿ ಅಸಮಾನತೆ ಇರುವವರೆಗೆ ಸೂಕ್ಷ್ಮವಾಗಿ ಅಡ್ಡಿಯೊದಗಿಸುತ್ತಲೇ ಇರುತ್ತದೆ.

ಇಂತಹ ಒಂದು ಪರಿಸ್ಥಿತಿಯಲ್ಲಿ ಸಂಘಟಿತ ವಲಯದಲ್ಲಿನ ಮಹಿಳೆಯರಿಗೆ ಹೊಸ ತಂತ್ರಜ್ಞಾನಗಳ ಬಳಕೆಯಿಂದ ಏನು ಅನುಕೂಲ? ಇದು ಹಲವು ಸಂದರ್ಭಗಳಲ್ಲಿ ಮಹಿಳೆಯರಿಗೆ ಉದ್ಯೋಗ ನಷ್ಟ ಎಂಬುದನ್ನು ರೋಹಿಣಿ ತಂಬಾಕು, ಗಣಿಗಾರಿಕೆ ಹಾಗೂ ಔಷಧ ಕೈಗಾರಿಕೆಗಳ ಮೂಲಕ ಉದಾಹರಿಸುತ್ತಾರೆ. ಸಂಘಟಿತ ವಲಯದಲ್ಲಿ ಇರುವ ಕೆಲಸಗಳು ನಷ್ಟವಾದರೂ, ಹೊಸ ಉದ್ಯೋಗಗಳನ್ನು ಕಿರಿಯ ವಯಸ್ಸಿನ ಅವಿವಾಹಿತ ಹಾಗೂ ವಿದ್ಯಾರ್ಹತೆಯುಳ್ಳ ಮಹಿಳೆಯರಿಗಾಗಿ ಗುತ್ತಿಗೆ ಕೆಲಸದ ಆಧಾರದ ಮೇಲೆ ಹೊಸ ಉದ್ಯೋಗಗಳನ್ನು ಸೃಷ್ಟಿಸಲಾಗುತ್ತದೆ. ಹೀಗಾಗಿ, ಭದ್ರತೆ ಇರುವ ಕೆಲಸಗಳಿಗೆ ಬದಲಾಗಿ ಅಭದ್ರತೆಯ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಇದಲ್ಲದೆ ಈ ಹೊಸ ಕೆಲಸಗಳ ಆರೋಗ್ಯ ದುಷ್ಪರಿಣಾಮಗಳನ್ನು ಸರಿಯಾದ ರೀತಿಯಲ್ಲಿ ಸಂಶೋಧನೆ ನಡೆಸಿಲ್ಲ. ಅಲ್ಲದೆ ಈಗಿರುವ ಕಾನೂನಿನ ವ್ಯಾಪ್ತಿಗೂ ಇವುಗಳು ಸೇರಿಲ್ಲ.

ಹೀಗಾಗಿ ಹೊಸ ತಂತ್ರಜ್ಞಾನಗಳ ಬಳಕೆ ಕೈಗಾರಿಕಾ ಮಹಿಳಾ ಕಾರ್ಮಿಕರಿಗೆ ಇರುವ ಆಯ್ಕೆಗಳನ್ನು ಹೆಚ್ಚಿಸುವ ಬದಲು ಕಡಿಮೆ ಮಾಡುತ್ತಿರುವಂತೆ ಕಂಡುಬರುತ್ತದೆ.

ರೋಹಿಣಿ ಮತ್ತೊಂದು ಪ್ರಶ್ನೆಯನ್ನು ವಾದಕ್ಕೆತ್ತಿಕೊಳ್ಳುತ್ತಾರೆ: ಈ ಸಮಸ್ಯೆಗೆ ಉತ್ತರವೇನು? ವಿಭಿನ್ನ ತಾಂತ್ರಿಕ ಬದಲಾವಣೆಗಳ ತಕ್ಷಣದ ಪರಿಹಾರವೆಂದರೆ ಅಥವಾ ಕನಿಷ್ಠ ನಮ್ಮಂತಹ ಕಾರ್ಮಿಕಶಕ್ತಿ ಹೆಚ್ಚಿರುವಂತಹ ರಾಷ್ಟ್ರಗಳಿಗೆ ಮಧ್ಯಂತರ ತಂತ್ರಜ್ಞಾನಗಳ ಅಳವಡಿಕೆ, ರೋಹಿಣಿ ಇದನ್ನು ಅವಾಸ್ತವ, ಕಾರ್ಯಸಾಧುವಲ್ಲದ್ದು ಎಂದು ತಳ್ಳಿಹಾಕುತ್ತಾರೆ. ಪುರುಷರು ಮತ್ತು ಮಹಿಳೆಯರು ಜೀವನ ನಿರ್ವಹಣೆಗಾಗಿಯೇ ಏಕೆ ದೀರ್ಘ

ಅವಧಿಗಳು ದುಡಿಯಬೇಕು? ಮಹಿಳೆಯರು ಮನೆಗೆಲಸಗಳನ್ನು ತಾವೇ ಮಾಡಬೇಕಿರುವುದರಿಂದ ಅವರ ದುಡಿಮೆಯಂತೂ ಇನ್ನೂ ತ್ರಾಸದಾಯಕವಾಗುತ್ತದೆ.

ತಂತ್ರಜ್ಞಾನವೇ ಸಮಸ್ಯೆಯಾಗದು ಎಂದು ರೋಹಿಣಿ ವಾದಿಸುತ್ತಾರೆ; ಇದು ವಿಮೋಚನೆಗೂ ಕಾರಣವಾಗಬಹುದು. ಏಕೆಂದರೆ ಇದು ಉತ್ಪಾದಕತೆಯನ್ನು ಹೆಚ್ಚಿಸುತ್ತದೆ. ಇದು ಹೆಚ್ಚು ಬಿಡುವಿನ ವೇಳೆಯನ್ನೂ ಸೃಷ್ಟಿಸುವ ಸಾಮರ್ಥ್ಯ ಹೊಂದಿರುತ್ತದೆ. ಸಮಸ್ಯೆ ಎಂದರೆ, ವೇತನ ಸಹಿತ ಕೆಲಸಕ್ಕೆ ಇರುವ ಹೆಚ್ಚಿನ ಆದ್ಯತೆ. ಸಮಾಜದ ಸ್ವಾಸ್ಥ್ಯಕ್ಕೆ ಮುಖ್ಯ ಕೊಡುಗೆ ಸಲ್ಲಿಸುವ ಗೃಹ ವಲಯದಲ್ಲಿ ಮಹಿಳೆಯರು ನಿರ್ವಹಿಸುವ ಪಾಲನೆ ಪೋಷಣೆ ಕಾರ್ಯಗಳಿಗೆ ಆದ್ಯತೆ ನೀಡದಿರುವುದು. ಮಹಿಳೆಯರು ಪಾರಂಪರಿಕವಾಗಿ ನಿರ್ವಹಿಸುತ್ತಿರುವ 'ಕೆಲಸ'ವನ್ನೂ ಒಳಗೊಳ್ಳುವಂತೆ 'ಕೆಲಸ'ದ ತತ್ವದ ಚಿಂತನೆಯೇ ಪೂರ್ಣ ಬದಲಾಗಬೇಕೆಂದು ರೋಹಿಣಿ ವಾದಿಸುತ್ತಾರೆ. ಅವರ ಪ್ರಕಾರ, "ಈ 'ಕೆಲಸ'ವನ್ನು ಹಣಕಾಸಿನ ದೃಷ್ಟಿಯಿಂದ ಅಳೆಯುವುದು ಸಾಧ್ಯವಿಲ್ಲ, - ಅಥವಾ ಅಪೇಕ್ಷಣೀಯವೂ ಅಲ್ಲ ಅಥವಾ ಅಗತ್ಯವೂ ಅಲ್ಲ. ಹೀಗಿದ್ದೂ ಮಾನವೀಯ ಹಾಗೂ ಸಾಮಾಜಿಕ ದೃಷ್ಟಿಯಲ್ಲಿ ಇದರ ಮೌಲ್ಯ ಪರಿಗಣಿಸುವುದಕ್ಕೆ ನಮಗೇನೂ ಅಡ್ಡಿಯಾಗಬಾರದು...." ಅಲ್ಲದೆ, ಈ 'ಕೆಲಸ'ವನ್ನು ಪುರುಷರೂ ಹಂಚಿಕೊಳ್ಳಲು ಸಾಧ್ಯವಾಗುವಂತಹ ಶಾಸನ ಜಾರಿಯಾಗಬೇಕು ಎಂದೂ ಅವರು ವಾದಿಸುತ್ತಾರೆ.

ಇಂತಹ ಒಂದು ದರ್ಶನವನ್ನು ಹೊಸ ತಂತ್ರಜ್ಞಾನಗಳ ಮೂಲಕ ಮಾನವ ಇತಿಹಾಸದಲ್ಲಿ ಸಾಧ್ಯವಾಗಿಸಿಕೊಳ್ಳಬಹುದು. ಇದರಿಂದ ಲೌಕಿಕ ಅಗತ್ಯಗಳ ಉತ್ಪಾದನೆಗೆ ಅಗತ್ಯವಾದ ಸಮಯ ಉಳಿತಾಯವಲ್ಲದೆ, ಪಾಲನೆ ಪೋಷಣೆ ಚಟುವಟಿಕೆಗಳಿಗೆ ವ್ಯಯಿಸುವ ಸಮಯ ಅಧಿಕವಾಗುತ್ತದೆ. ಈ ಒಂದು ದರ್ಶನಕ್ಕೆ ಅನುಕೂಲವಾಗುವಂತೆ ಕೆಲವು ಬೇಡಿಕೆಗಳನ್ನೂ ಅವರು ಮುಂದಿಡುತ್ತಾರೆ. ಇವುಗಳಲ್ಲಿ ಉದ್ಯೋಗ ಸ್ಥಳದ ಪ್ರಜಾಸತ್ತಾತ್ಮಕತೆ, ಗೃಹಕೃತ್ಯದ ಹೊಣೆಯ ಭಾರವನ್ನು ಕಡಿಮೆಯಾಗಿಸುವ ತಂತ್ರಜ್ಞಾನಗಳ ಅಳವಡಿಕೆ, ಪಿತೃ ರಜೆ ಸೌಲಭ್ಯ, ಹೆಣ್ಣಿನ ಕೆಲಸ ಎನ್ನುವಂತಹ ವಿಚಾರಗಳ ಸಾಮಾಜಿಕ ಪ್ರಾಮುಖ್ಯತೆಯ ಬಗ್ಗೆ ಅರಿವು ಹೆಚ್ಚಿಸುವ ಆಂದೋಲನಗಳು, ಅಸಂಘಟಿತ ವಲಯವನ್ನು ಒಳಗೊಳ್ಳುವ ರಕ್ಷಣಾತ್ಮಕ ಶಾಸನ, ಹಾಗೂ ಅಂತರರಾಷ್ಟ್ರೀಯ ಕಾರ್ಮಿಕ ಸಂಘ ಸಂಪರ್ಕಗಳ ಸ್ಥಾಪನೆ.

ಮಹಿಳೆಯರ ಕೆಲಸಕ್ಕೆ ಸಂಬಂಧಿಸಿದಂತೆ ಕೆಲವು ಪ್ರಮುಖ ಪ್ರಶ್ನೆಗಳನ್ನು ರೋಹಿಣಿ ಹೆನ್ಸ್‌ಮನ್‌ರ ಪ್ರಬಂಧ ಎತ್ತುತ್ತದೆ. ಟ್ರೇಡ್ ಯೂನಿಯನ್‌ಗಳು ಮಹಿಳಾ ವಿಚಾರಕ್ಕೆ ಸಂಬಂಧಿಸಿದಂತೆ ತೋರಿರುವ ಚಾರಿತ್ರಿಕ ನಿರ್ಲಕ್ಷ್ಯದ ಹಿನ್ನೆಲೆಯಲ್ಲಿ ಇವು ಹೆಚ್ಚು ಪ್ರಸ್ತುತವೆನಿಸುತ್ತದೆ.

ಹೊಸ ತಂತ್ರಜ್ಞಾನಗಳ ಅಳವಡಿಕೆ ಎಂದರೆ, ಕಡಿಮೆ ಎನ್ನುವುದಕ್ಕಿಂತ ಹೆಚ್ಚಿನ ಕೆಲಸದ ಒತ್ತಡಗಳು ಎಂದೇ ಅರ್ಥ ಎಂದು ರೋಹಿಣಿ ಹೇಳುತ್ತಾರೆ. ಈ ಹೆಚ್ಚಿನ ಕೆಲಸದ ಹೊರೆಯನ್ನು ಎದುರಿಸುವುದು ಅಥವಾ ವೇತನ ಹೆಚ್ಚಳಕ್ಕೆ ಉತ್ಪಾದಕತೆಯನ್ನು ಜೋಡಿಸುವ ಆಡಳಿತ ವರ್ಗದ ಧೋರಣೆ ವಿರುದ್ಧ ಹೋರಾಡಲು ಟ್ರೇಡ್ ಯೂನಿಯನ್‌ಗಳಿಗೆ ಸಾಧ್ಯವಾಗಿಲ್ಲ. ಹೊಸ ತಂತ್ರಜ್ಞಾನಗಳಲ್ಲಿನ ಹಣ ಹೂಡಿಕೆಯ ವೆಚ್ಚ ಸರಿದೂಗಿಸಲು ಹಾಗೂ ಯಂತ್ರೋಪಕರಣಗಳು ಹಳತಾಗುವ ಮುಂಚೆ ಹೆಚ್ಚಿನ ಲಾಭ ಪಡೆದುಕೊಳ್ಳುವುದಕ್ಕಾಗಿ ಕಾರ್ಮಿಕರಿಂದ ಹೆಚ್ಚಿನ ಶ್ರಮ ಮೌಲ್ಯ ದಕ್ಕಿಸಿಕೊಳ್ಳುವ ಕಾರಣಕ್ಕಾಗಿ ಕಾರ್ಮಿಕರು ಕಡಿಮೆ ಕೆಲಸವಲ್ಲ ಹೆಚ್ಚು ಹೆಚ್ಚು ಕೆಲಸ ಮಾಡಬೇಕು ಎಂದೇ ಅರ್ಥ.

ಉದ್ಯೋಗ ನಷ್ಟ ತಡೆಗಟ್ಟಲು ಟ್ರೇಡ್ ಯೂನಿಯನ್‌ಗಳು ವಿಫಲವಾಗಿವೆ. ಅಲ್ಲದೆ ಸಂಘಟಿತ ವಲಯದಿಂದ ಅರಕ್ಷಿತ, ಹೆಚ್ಚು ಶೋಷಣಾತ್ಮಕವಾದ ಹಾಗೂ ಹೆಚ್ಚು ಯೂನಿಯನ್‌ಗಳು ಇಲ್ಲದಂತಹ ಅಸಂಘಟಿತ ವಲಯಕ್ಕೆ ಉತ್ಪಾದನೆ ವರ್ಗಾವಣೆಗೊಳ್ಳುವುದನ್ನು ತಡೆಯಲೂ ಈ ಯೂನಿಯನ್‌ಗಳು ವಿಫಲವಾಗಿದೆ.

ಮಹಿಳೆಯರ ಕೆಲಸದ ಸಾಮಾಜಿಕ ಹಾಗೂ ಆರ್ಥಿಕ ಮೌಲ್ಯ ಗುರುತಿಸಲು ಕಾರ್ಮಿಕ ಸಂಘಗಳು ವಿಫಲವಾಗಿರುವುದೂ ಮತ್ತೊಂದು ಪ್ರಮುಖ ಅಂಶ. ಗೇಬ್ರಿಯಲ್ ಡೈಟ್ರಿಚ್ ಹೇಳುವಂತೆ, ಆದರೆ ತಮ್ಮ ಕಾರ್ಯಕ್ರಮ ಪಟ್ಟಿಯಲ್ಲಿ 'ಮಹಿಳೆಯ ಬೇಡಿಕೆ'ಗಳನ್ನು ಕಾರ್ಮಿಕ ಸಂಘಗಳು ಎಂದೂ ಕೇಂದ್ರವಾಗಿಸಿಕೊಂಡಿಲ್ಲ. ಈ ಹಿನ್ನೆಲೆಯಲ್ಲಿ 'ಮಹಿಳಾ ಕೆಲಸ'ದ ಮೌಲ್ಯ ಗುರುತಿಸುವುದನ್ನು ಆಧರಿಸಿದ ಬೇಡಿಕೆಗಳು ಉದಾಹರಣೆಗೆ ಪಿತೃ ರಜೆ ಸೌಲಭ್ಯದ ಬೇಡಿಕೆಯಂತಹದು ಮುಖ್ಯವಾಗುತ್ತದೆ.

ಹೀಗಿದ್ದೂ ತಂತ್ರಜ್ಞಾನವೇ ಮುಖ್ಯ ಸಮಸ್ಯೆ ಎಂಬುದು ಈ ಪ್ರಬಂಧದ ಕೇಂದ್ರ ವಿಚಾರವಲ್ಲ. ತಂತ್ರಜ್ಞಾನವನ್ನು ಹೇಗೆ ಬಳಸಲಾಗುತ್ತದೆ ಎಂಬುದು ಪ್ರಶ್ನಾರ್ಹ. ಆದರೆ ಕೆಲವು ತಂತ್ರಜ್ಞಾನಗಳು, ಹಲವು ಸಾಕ್ಷ್ಯಾಧಾರಗಳಿಂದ ಸಾಬೀತಾಗಿರುವಂತೆ ಬದುಕಿಗೆ ಮಾರಕವಾದುದು. ಇದನ್ನು ಏಕಪಕ್ಷೀಯವಾಗಿಯೇ

ಯಾರದೇ ನಿಯಂತ್ರಣದಲ್ಲಿದ್ದರೂ ವಿರೋಧಿಸಲೇಬೇಕು. ಅಣ್ವಸ್ತ್ರ ತಂತ್ರಜ್ಞಾನ ಸೃಷ್ಟಿಸುವ ಅಣ್ವಸ್ತ್ರ ಕಸದ ಸಮಸ್ಯೆಗೆ ತಾಂತ್ರಿಕ ಪರಿಹಾರ ಇಲ್ಲ. ಹಾರ್ಮೋನ್‌ಯುಕ್ತ ಸಂತಾನಶಕ್ತಿ ನಿಯಂತ್ರಣ ತಂತ್ರಜ್ಞಾನ ಸೃಷ್ಟಿಸುವ ತಳಿ ಮಾರ್ಪಾಡುಗಳ ಸಮಸ್ಯೆಗೆ ತಾಂತ್ರಿಕ ಪರಿಹಾರ ಇಲ್ಲ. ಮೀನುಗಾರಿಕೆಯಲ್ಲಿ ತಾಂತ್ರಿಕ ಪ್ರಗತಿ ಮತ್ಸ್ಯ ಸಂಪತ್ತನ್ನು ಸೂರೆ ಹೊಡೆಯುವುದಲ್ಲದೆ ಪರಿಸರ ಸಮತೋಲನಕ್ಕೂ ಬೆದರಿಕೆ ಒಡ್ಡುತ್ತದೆ. ಇದು ಪಾರಂಪರಿಕ ಬೆಸ್ತರ ಬದುಕಿನ ನೆಲೆಯನ್ನೇ ಕಿತ್ತುಕೊಂಡಂತೆ! ಹೀಗಾಗಿ ಯಾವುದೇ ಮೌಲ್ಯ ಆರೋಪಿಸದೆ ತಂತ್ರಜ್ಞಾನದಲ್ಲಿ ಹಣ ಹೂಡಿಕೆ, ಬೆಂಬಲಿಸುವ ರೋಹಿಣಿಯವರ ವಾದ ಕೆಲವು ತಂತ್ರಜ್ಞಾನಗಳ ಕೆಟ್ಟ ಪರಿಣಾಮಗಳ ಸಾಧ್ಯತೆಗಳನ್ನು ಪೂರ್ಣ ಕಡೆಗಣಿಸುತ್ತದೆ. ತಂತ್ರಜ್ಞಾನವನ್ನು ಯಾರು ನಿಯಂತ್ರಿಸುತ್ತಾರೆ ಎಂಬುದಲ್ಲದೆ ಯಾವ ರೀತಿಯ ತಂತ್ರಜ್ಞಾನ ಎಂಬ ಪ್ರಶ್ನೆ ಹಾಕಿಕೊಳ್ಳುವುದೂ ಮುಖ್ಯವಾದುದೇ.

ಈ ಪ್ರಬಂಧ ಗುರುತಿಸಲು ವಿಫಲವಾಗಿರುವ ಮತ್ತೊಂದು ಅಂಶ ಎಂದರೆ, ತಂತ್ರಜ್ಞಾನ ಬದಲಾವಣೆಗಳಿಂದ ಸೃಷ್ಟಿಯಾಗುವ ಆಡಳಿತವರ್ಗ ಮತ್ತು ಕಾರ್ಮಿಕರ ಮಧ್ಯದ ಮಾಹಿತಿ ಅಂತರ. ಈ ಅಂತರ ಮುಚ್ಚುವುದು ಕಷ್ಟಕರ ಮಾತ್ರವಲ್ಲ ಇದು ಯಾವುದೇ ರೀತಿಯ ಕೈಗಾರಿಕಾ-ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ವಿರುದ್ಧವಾದುದು. ಈ ಮಾಹಿತಿ ಕೊರತೆಯ ಜೊತೆ ಜೊತೆಗೇ ಸಂಪನ್ಮೂಲ ಕೊರತೆಯೂ ಇರುತ್ತದೆ. ಹೊಸ ತಂತ್ರಜ್ಞಾನಗಳು ಬಂಡವಾಳಶಾಹಿ ಮಾಲೀಕರ ಕೈಯಲ್ಲೇ ಸಂಪತ್ತು ಕ್ರೋಢೀಕರಣಗೊಳ್ಳುವಂತೆ ಮಾಡುತ್ತದೆ. ನಿಯಂತ್ರಣ ಕ್ರಮಗಳಿಂದ ಮುಕ್ತವಾಗಿ, ವಿಳಂಬ ನೀತಿ ಉತ್ತೇಜಿಸುವ ನ್ಯಾಯಾಂಗ ಕ್ರಮಗಳ ರಕ್ಷಣೆಗೊಳಪಟ್ಟು, ಆಡಳಿತ ವರ್ಗ ಘಟಕಗಳನ್ನು ಮುಚ್ಚಲು, ಲಾಕ್‌ಔಟ್ ಮಾಡಲು, ಲಾಭವನ್ನೆಲ್ಲಾ ತಾನೇ ಪಡೆದುಕೊಳ್ಳಲು, ಯೂನಿಯನ್ ರಹಿತ ವಾತಾವರಣಕ್ಕೆ ಉತ್ಪಾದನೆ ಸ್ಥಳಾಂತರಿಸಲು ಹಾಗೂ ಕಾರ್ಮಿಕ ಶಕ್ತಿಯ ಶಕ್ತಿಯನ್ನೆಲ್ಲಾ ಪೂರ್ಣ ಬಸಿದುಹಾಕಲು ಆಡಳಿತವರ್ಗ ಮುಕ್ತವಾಗಿರುತ್ತದೆ.

'ಮಹಿಳಾ ಕೆಲಸ'ಕ್ಕೆ ಸಾಮಾಜಿಕ ಮೌಲ್ಯ ನೀಡುವ ವಾದ ಪೂರ್ಣ ಸರಿಯಾದರೂ, ಅದರ ಆರ್ಥಿಕ ಮೌಲ್ಯ ಗಣಿಸದೆ ಇದು ಸಾಕಾರವಾಗುವುದಾದರೂ ಹೇಗೆ ಎಂಬುದು ಕಷ್ಟ. ರೋಹಿಣಿ ಅವರಿಗೆ, ಮಹಿಳಾ ಕೆಲಸದ ಆರ್ಥಿಕ ಮೌಲ್ಯ ಗುರುತಿಸುವುದು ಅಪೇಕ್ಷಣೀಯವಲ್ಲ. ಏಕೆಂದರೆ ಇದು 'ಪೂರ್ಣ ವಾಣಿಜ್ಯೀಕೃತ' ವಾತಾವರಣಕ್ಕೆ ದಾರಿಯಾಗುತ್ತದೆ. ಆಗ ಯಾವುದನ್ನೂ ಉಚಿತವಾಗಿ ಮಾಡಲಾಗದು. ಎಲ್ಲವನ್ನೂ ಹಣದಲ್ಲಿ ಅಳೆಯ ಬೇಕಾಗುತ್ತದೆ. ಇಲ್ಲಿ ಅವರ ವಾದದ ಧಾಟಿ ಮೆಚ್ಚ ಬಹುದಾದರೂ, ಮನೆಗೆಲಸ ಹಾಗೂ ಶಿಶುಪಾಲನೆಯ ಆರ್ಥಿಕ ಮೌಲ್ಯದ ಮಾನ್ಯತೆ ಅಗತ್ಯವಾದುದು. ರಕ್ಷಣಾತ್ಮಕ ವಿಧೇಯಕ ಹಾಗೂ ಕನಿಷ್ಟ ವೇತನಕ್ಕೆ ಹೋರಾಡುತ್ತಿರುವ ಗೃಹ ಕಾರ್ಮಿಕರ ಸಂಘಗಳ ಹೋರಾಟಕ್ಕೆ ಇದು ತೀರಾ ಅಗತ್ಯವಾದುದು. ಇಂದು ಪ್ರತಿಷ್ಠಿತ ಸಂಘಟಿತ ವಲಯದಲ್ಲಿರುವ ಅನೇಕ ಮಹಿಳೆಯರು ವೇತನ ಸಹಿತ ಕೆಲಸ ಹಾಗೂ ಗೃಹಕೃತ್ಯಗಳನ್ನು ಒಟ್ಟಿಗೇ ನಿಭಾಯಿಸಲು ಕಾರಣವಾಗಿರುವುದಕ್ಕೆ ಮನೆಗೆಲಸಗಳನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ನಿಭಾಯಿಸಲು ಲಭ್ಯವಿರುವಂತಹ ಮನೆಗೆಲಸದವರು ಅಥವಾ ಗೃಹ ಕಾರ್ಮಿಕರೂ ಕಾರಣರಾಗಿದ್ದಾರೆ.

ಅಂತಿಮವಾಗಿ, ವಿಭಕ್ತ ಕುಟುಂಬವೂ ಮಹಿಳೆಯರ ದಮನಕ್ಕೆ ಮೂಲವಾಗಿರುವ ವಿಚಾರವನ್ನು ಈ ಪ್ರಬಂಧ ಪರಿಶೀಲಿಸಿಲ್ಲ. ಪುರುಷ ಮತ್ತು ಮಹಿಳೆ ವಿವಾಹವಾಗಿ ಮಕ್ಕಳನ್ನು ವಿಶೇಷವಾಗಿ ಮಿತ್ರರನ್ನು ಉತ್ಪಾದಿಸುವ ಒತ್ತಡ, ದ್ವಿಲಿಂಗಿ-ಏಕಪತಿ, ಏಕಪತ್ನಿ-ವಿಭಕ್ತ ಕುಟುಂಬ ವ್ಯವಸ್ಥೆಯ ಒತ್ತಡ ಇರುವವರೆಗೆ ಈ ವ್ಯವಸ್ಥೆಯಲ್ಲಿ ಅಂತರ್ಗತವಾಗಿಯೇ ಇರುವ ದಮನವನ್ನು ಮಹಿಳೆ ಸಹಿಸಿಕೊಳ್ಳುತ್ತಲೇ ಸಾಗಬೇಕಾಗುತ್ತದೆ. ಈಗ ಆಗಬೇಕಾಗಿರುವುದು ಪಾಲನೆ, ಪೋಷಣೆಯ ವ್ಯವಸ್ಥೆಯ ವಿಮರ್ಶಾತ್ಮಕ ಪುನರಾವಲೋಕನ, ಪಿತೃಪ್ರಧಾನ ವಿಭಕ್ತ ಕುಟುಂಬಕ್ಕೆ ಪರ್ಯಾಯವಾಗಿ ಸಮುದಾಯ ಬಾಂಧವ್ಯಗಳು ಮತ್ತು ಸಾಮಾಜಿಕ ಸ್ವರೂಪಗಳ ಅಭಿವೃದ್ಧಿಯ ಪ್ರಯತ್ನ. ಹೀಗಾಗಿ ಪುರುಷರು ಮನೆಗೆಲಸ ಹಂಚಿಕೊಳ್ಳುವುದು ಸ್ವಾಗತಾರ್ಹ ಪ್ರಸ್ತಾವವಾದರೂ, ಮಹಿಳೆಯರು ಮತ್ತು ಪುರುಷರನ್ನು ವಿಮೋಚನೆಗೊಳಿಸುವ ಗೃಹ ವಲಯದ ಪೂರ್ಣ ಬದಲಾವಣೆ ಹೆಚ್ಚು ಅಗತ್ಯವಾದುದು.

●

ಪಿತೃಪ್ರಧಾನ ವ್ಯವಸ್ಥೆ ಹಾಗೂ ಲಿಂಗಾಧಾರಿತ ಶ್ರಮ ವಿಭಜನೆ ಕಾರ್ಮಿಕ ವರ್ಗವನ್ನು ವಿಭಜಿಸುತ್ತದೆ. ಪಿತೃಪ್ರಧಾನ ವ್ಯವಸ್ಥೆಯ ವಿರುದ್ಧದ ಹೋರಾಟ ದುಡಿಯುವ ಪುರುಷ ಮತ್ತು ಮಹಿಳೆಯರನ್ನು ಒಗ್ಗೂಡಿಸಬಹುದು.

ಬಿಗಿದ ಹಗ್ಗ

ಕೈಕಾಲು ದೇಹವ ಸೇರಿಸಿ
ಬಿಗಿದ ಹಗ್ಗದ ಸುತ್ತು
ಅತ್ತಿತ್ತ ಅಲುಗಿಸಲಾಗುವ
ಅಂಗವೊಂದೇ ಕತ್ತು
ಬೇಕೆಂದಲ್ಲಿ ಚಲಿಸುವಂತಿಲ್ಲ ಕಾಲು
ಎಟುಕುವ ವಸ್ತುವಿಗೂ
ಚಾಚುವಂತಿಲ್ಲ ಕೈ
ಬಂಧನದ ಮಿತಿಯಲ್ಲೇ
ಹೊರಳುವ ಮೈ
ಆದರೆ ಮನಸ್ಸಿಗೆ ಯಾವ ಕಟ್ಟು?
ಎಲ್ಲೆಂದರಲ್ಲಿ ಹಾರುತ್ತಾ
ಏನೇನೋ ಕನಸು ಕಾಣುತ್ತಾ
ತರುವುದು ಆಗಾಗ ಬಿಕ್ಕಟ್ಟು
ಹೀಗೇ ಬಿಗಿಸಿಕೊಂಡ ಹಿರಿಜೀವಿಗಳಿಗೆ
ಏನೋ ಸೇಡು
ಸಡಿಲಿಸ ಹೊರಟ ಕಟ್ಟುಗಳನ್ನೂ
ಭದ್ರಗೊಳಿಸುತ್ತಾ
ಸ್ವತಂತ್ರ ಕಣ್ಣು ಕಿವಿಗಳಿಗೂ
ಅಂಕೆ ಇಡುತ್ತಾ
ಸುತ್ತುವರಿದ ಬಿಗಿ ಪಹರೆ
ಮಳೆ ಗಾಳಿ ಬಿಸಿಲಿಗಾದರೂ
ಹಗ್ಗ ಲೊಡ್ಡಾಗುವುದೇನೋ
ಎಂದು ಕಾದರೆ
ಮೋಚಿ ದಾರಕೆ ಮೇಣ ಬರೆದಂತೆ
ಮತ್ತೂ ಗಟ್ಟಿಯಾಗಿ ಬಿಗಿದ ಭೀಮಶಕ್ತಿ
ಈ ಬಿಗಿತದಿಂದ ಇಲ್ಲವೆ ಮುಕ್ತಿ?
ಈ ಸುತ್ತು ಕತ್ತಿಗೂ ಕುಣಿಕೆಯಾಗಿ
ಬಿಗಿವವರೆಗೂ
ಪಿಳಿಪಿಳಿ ಕಣ್ಣು ಬಿಡುತ್ತಾ
ಹಗಲು ಗನಸು ಕಾಣುತ್ತಾ
ವಿಲವಿಲನೆ ಒದ್ದಾಡುವ
ಜೀವಂತ ಹುಳು.

- ಪ್ರಭಾಮಣಿ ನಾಗರಾಜ

ದೊಂಬರಾಟಕ್ಕೆ ಸೂತ್ರ ಕಟ್ಟುವುದು

ಮಾರುದ್ದಕ್ಕೆ ಹತ್ತು ಮಾರುದ್ದ ಸ್ಪರ್ಧೆ
ಅದರ ಟಿಸಲುಗಳು ಬಿಂದುವಿಂದ
ಸಾಹಸ್ರದವರೆಗೆ
ಇಲ್ಲಿ ವಾಮನ ಪಾದದವರೆ ಹೆಚ್ಚು
ಸೌಟು ಪಾತ್ರೆಗಳ ನಡುವೆ ಯುದ್ಧ!
ಎಲ್ಲ ನೀವೇ ಎಂದು ಹೇಳುತ್ತಾ
ಎಲ್ಲೂ ಇಲ್ಲವಾಗಿಸಿದ್ದು
ಬೆಲೂನಿಗೆ ಗಾಳಿ ತುಂಬಿ
ರಂಧ್ರ ಕೊರೆದು
ಪುಸ್ಸೆಂದು ಅಕಾರಬಿಟ್ಟಾಗ
ಕಸದ ಡಬ್ಬಿಗೆ ಬಿತ್ತಿ
ಇಂಥ ಅಡ್ಡ ದಿಡ್ಡಿಗಳದೇ
ಕಾರು-ಬಾರು?
ಇನಿಯನೊಲವ ಪಡೆಯಲು
ನಲ್ಲೆ ಪರದಾಡಿದಂತೆ
ನಮ್ರತೆ ನಯ ನಾಜೋಕುಗಳ
ಉಂಬಾಟದಲ್ಲಿ
ಹೃದಯ ಕತ್ತಲೆ
ಹೆಪ್ಪುಗಟ್ಟಿದ ರಕ್ತ
ಕಣ್ಣುಹನಿಯದೆ ಬಿಗುವಾದ
ಮಂಪರು
ಯಾಕಿಷ್ಟು ಯತ್ನ?
ತಂತ್ರಗಳ ಗೂಡಿನಲ್ಲಿ
ಮಾರಿ ಲಗ್ಗೆಯು ಹಾಕಿ
ಎದೆ ಸೆಟೆದು ಬಿಗುವಾಗಿ
ಆದರೆ, ಕಾವು ಮೂರೇ ದಿನಕ್ಕೆ ಆರಿ
ಮತ್ತೆ ಅದೇ
ಸೌಟು ಪಾತ್ರೆಗಳ ನಡುವೆ ಯುದ್ಧ !
ಮುಂದಿನ
ದೊಂಬರಾಟಕ್ಕೆ ಸೂತ್ರವ ಕಟ್ಟುವುದು.

- ಡಾ. ಆರ್. ಸುನಂದಮ್ಮ

ಲೈಂಗಿಕ ಅಲ್ಪಸಂಖ್ಯಾತ ಗುಂಪುಗಳ ಮೇಲೆ ಪೊಲೀಸ್ ದೌರ್ಜನ್ಯದ ವಿರುದ್ಧ ಹೋರಾಟದ ಒಂದು ವರದಿ

ಕಳೆದೆರಡು ವಾರಗಳಲ್ಲಿ, ಲೈಂಗಿಕ ಅಲ್ಪಸಂಖ್ಯಾತ ಗುಂಪುಗಳು (ಉದಾ : ಗೇ, ಲೆಸ್ಬಿಯನ್, ಟ್ರಾನ್ಸ್‌ಜೆಂಡರ್, ಹಿಜಿಡಾಗಳು) ಮುಂತಾದವರ ಮೇಲೆ ನಡೆಯುತ್ತಿರುವ, ಪೊಲೀಸ್ ದೌರ್ಜನ್ಯದ ವಿರುದ್ಧ ತೀವ್ರ ಆಂದೋಲನ ಶುರುವಾಗಿದೆ. ಇದೇ ಮೊದಲ ಬಾರಿಗೆ ಬೆಂಗಳೂರಿನ ಇತಿಹಾಸದಲ್ಲಿ, ಲೈಂಗಿಕ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯದ ವಿರುದ್ಧ ಕರಪತ್ರಗಳನ್ನು ಮುದ್ರಿಸಿ ಸಾರ್ವಜನಿಕ ಉದ್ಯಾನಗಳಲ್ಲಿ, ರಸ್ತೆಗಳಲ್ಲಿ ಹಂಚಲಾಯಿತು.

ಇದೇ ಏಪ್ರಿಲ್ 12ರಂದು ಹಲವು ಸಂಘಟನೆಗಳು, ವ್ಯಕ್ತಿಗಳು ಭೇಟಿಯಾಗಿ ಸಾರ್ವಜನಿಕ ಪಾರ್ಕುಗಳಲ್ಲಿ ಸಾಮಾನ್ಯ ಜನರಿಗೆ ಪೊಲೀಸರು ಕೊಡುತ್ತಿರುವ ಕಿರುಕುಳ ತೀವ್ರವಾಗಿ ಹೆಚ್ಚುತ್ತಿರುವ ಬಗ್ಗೆ ಚರ್ಚಿಸಲು ಸೇರಿದ್ದುವು. Alternative Law Forum, ಗೆಳೆಯ, Good as you, ಜಾಗೃತಿ, ಮಾನಸ, People's Union for Civil Liberties - Karnataka, ಸಬ್ರಂಗ್, ಸಂರಕ್ಷ, ಸಂಗಮ, ಸ್ವಭಾವ ಮುಂತಾದ ಸಂಘಟನೆಗಳಲ್ಲದೆ, ದೆಹಲಿಯ 'CALERI'ಯಿಂದಲೂ ಪ್ರತಿನಿಧಿಯೊಬ್ಬರು ಈ ಸಭೆಯಲ್ಲಿ ಭಾಗವಹಿಸಿದ್ದರು.

ಈ ಸಭೆಯಲ್ಲಿ ಹಲವು ದಿಗ್ಭ್ರಮೆಗೊಳಿಸುವ ಅಂಶಗಳು ಬೆಳಕಿಗೆ ಬಂದುವು.

* ಫೆಬ್ರುವರಿ 23ರಂದು ಕಬ್ಬನ್ ಪಾರ್ಕಿನಲ್ಲಿ ಓಡಾಡುತ್ತಿದ್ದ ಮೂರು ಜನ ಗಂಡಸರನ್ನು ಹೊಯ್ಸಳ ತಂಡವು ಬಂಧಿಸಿದ್ದೇ ಅಲ್ಲದೆ ಕಾನೂನಿಗೆ ವಿರುದ್ಧವಾಗಿ ಅವರನ್ನು ರಾತ್ರಿಯಿಡೀ ಠಾಣೆಯಲ್ಲೇ ಇಟ್ಟುಕೊಂಡಿತ್ತು. ಮರುದಿನ ತಲಾ ನೂರು ರೂ ವಸೂಲು ಮಾಡಿ ಅವರನ್ನು ಬಿಡಲಾಯಿತು. ಯಾವುದೇ ಆರೋಪವನ್ನು ದಾಖಲು ಮಾಡದೆ, ವಸೂಲಿ ಮಾಡಿದ ಹಣಕ್ಕೆ ರಸೀತಿಯನ್ನು ಕೊಡದೆ ಅವರನ್ನು ಬಿಡಲಾಯಿತು.
* ಮಾರ್ಚ್ 22ರಂದು ಹೈಕೋರ್ಟ್ ಕಟ್ಟಡದ ಮುಂಭಾಗದಲ್ಲಿ ಹತ್ತು ಜನ ಗಂಡಸರನ್ನು ಬಂಧಿಸಿ, ವಿಧಾನಸೌಧ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಬರೆ ಬರುವಂತೆ ಹೊಡೆದು, ಅವರ ವಿಳಾಸ ಬರೆಸಿಕೊಂಡರು. ಅಲ್ಲದೆ, ಅವರನ್ನು ಇನ್ನೂ ಮಾನಸಿಕವಾಗಿ ಹಿಂಸಿಸಲು, ಅವರ ಮನೆಯವರಿಗೆ ವಿಷಯ ತಿಳಿಸುವುದಾಗಿ ಹೆದರಿಸಿದ ಪೊಲೀಸರು, ಅವರ ಚೀಲಗಳು, ಪಾಕೆಟ್‌ಗಳನ್ನ ಶೋಧಿಸಿ ಅದರಲ್ಲಿದ್ದ ಹಣ ಕಿತ್ತುಕೊಂಡರು. ಇಲ್ಲೂ ಯಾವುದೇ ಆರೋಪ ಫೈಲ್ ಮಾಡಲಿಲ್ಲ ಹಾಗೂ ರಸೀತಿ ನೀಡಲಿಲ್ಲ.
* ಮಾರ್ಚ್ 27ರಂದು ಇದೇ ರೀತಿ ಮೂರು ಜನ ಗಂಡಸರನ್ನು ಹೈಕೋರ್ಟ್‌ನ ಮುಂದೆ ಬಂಧಿಸಿ, ಅವರನ್ನು ನಿಂದಿಸಿ, ಕಿರುಕುಳ ಕೊಟ್ಟು ತಲಾ 350 ರೂ. ವಸೂಲ್ಮಾಡಿ, ಹೆದರಿಸಿ ಬಿಡಲಾಯಿತು.

ಇವು ಬೆಂಗಳೂರಲ್ಲೇ ನಡೆದ, ನಡೆಯುತ್ತಿರುವ ಘಟನೆಗಳು. ಈ ಬಗೆಯ ಪೊಲೀಸ್ ಕ್ರೌರ್ಯದ ಕುರಿತು ಚರ್ಚಿಸಲು ಸೇರಿದ ಸಂಘಟನೆಗಳು, ವರದಿಯಾಗಿದ್ದ ಘಟನೆಗಳನ್ನು ಪರಿಶೀಲಿಸಿದಾಗ - ಸುಲಭವಾಗಿ ಪೊಲೀಸರ ಕೆಂಗಣ್ಣಿಗೆ ಗುರಿಯಾಗುವವರು ಲೈಂಗಿಕ ಕೆಲಸಗಾರರು (ವೇಶ್ಯಾವೃತ್ತಿ ನಡೆಸುವವರು) ಬಾಲ ಕಾರ್ಮಿಕರು, ತಳ್ಳುಗಾಡಿಯ ಸಣ್ಣ ಪುಟ್ಟ ಮಾರಾಟಗಾರರು ಎಂಬ ಅಂಶ ಬೆಳಕಿಗೆ ಬಂತು. ಮಾನವ ಹಕ್ಕು ಪರವಾದ ಸಂಘಟನೆಗಳು ಹಾಗೂ ಈ ರೀತಿ ದೌರ್ಜನ್ಯಕ್ಕೊಳಗಾದವರ ಗುಂಪುಗಳು ಇಂಥ ಹಿಂಸಾಕೃತ್ಯಗಳ ವಿರುದ್ಧ ಹೋರಾಡುತ್ತಲೇ ಬಂದಿದ್ದರೂ, ಮೇಲೆ ಪ್ರಸ್ತಾಪಿಸಿದಂಥ ಘಟನೆಗಳೂ ಇನ್ನೂ ಭಿನ್ನ ರೀತಿಯವಾಗಿವೆ. ಇಲ್ಲಿ ಮುಖ್ಯವಾಗಿ ಪೊಲೀಸರು ಸಲಿಂಗಕಾಮಿಗಳು ಎಂದು ಅನುಮಾನ ಬಂದಂಥ ವ್ಯಕ್ತಿಗಳನ್ನೇ 'ಬಲಿಪಶು'ಗಳನ್ನಾಗಿ ಮಾಡಿಕೊಂಡಿದ್ದಾರೆ.

ಚರ್ಚೆಯಲ್ಲಿ, ಕೆಲವು ಮಹತ್ವದ ಪ್ರಶ್ನೆಗಳನ್ನು ಎತ್ತಲಾಯಿತು. ಸಲಿಂಗಕಾಮಿಗಳು ಹಾಗೂ ಲೈಂಗಿಕ ಅಲ್ಪಸಂಖ್ಯಾತ ಗುಂಪುಗಳೇ ಏಕೆ ಪೊಲೀಸರ ಕ್ರೌರ್ಯಕ್ಕೆ ಗುರಿಯಾಗುತ್ತಾರೆ? ಹಾಗೂ ಲೈಂಗಿಕತೆ ಎನ್ನುವುದು ಬರೀ ವೈವಾಹಿಕ ಸಂಬಂಧಕ್ಕೆ ಅಷ್ಟೇ ಸೀಮಿತವಾಗಿದೆಯೇ ಅಥವಾ ಇನ್ನಿತರ, ಪುರುಷ ಸಲಿಂಗಕಾಮಿಗಳು, ಮಹಿಳಾ ಸಲಿಂಗಕಾಮಿಗಳು, ವಿವಾಹೇತರ ಸಂಬಂಧಗಳು ಅಥವಾ ಹಿಜಿಡಾಗಳು ಮುಂತಾದ ಲೈಂಗಿಕ ಸಂಬಂಧಗಳಲ್ಲಿ - ಪರಸ್ಪರ ಒಪ್ಪಿಗೆಯಿದ್ದರೂ ಕೂಡ ಏಕೆ ಇದನ್ನು ಅಪರಾಧ ಎನ್ನುವಂತೆ ನೋಡಿ ಹೊಸಕಿ ಹಾಕಲಾಗುತ್ತಿದೆ? ತಮ್ಮದೇ ಗುಂಪಿಗೆ ಸೇರಿದ (ಸಲಿಂಗ) ವ್ಯಕ್ತಿಗಳನ್ನು ಪ್ರೇಮಿಸುವ ಪುರುಷ ಮತ್ತು ಸ್ತ್ರೀಯರನ್ನು, ಅನೈತಿಕವಾದ ಯಾವುದೋ ಹೊಲಸು ಕೆಲಸ ಮಾಡುವಂತೆ ನೋಡಲಾಗುತ್ತಿದೆ. ಇದರ ಪರಿಣಾಮವಾಗಿ ಇಂಥ ಸಂಬಂಧಗಳಲ್ಲಿ ತೊಡಗಿಕೊಂಡ ವ್ಯಕ್ತಿಗಳಲ್ಲಿ ಭಾವನೆಗಳ ತೀವ್ರ ತ್ವೊಳಲಾಟ, ನಾಚಿಕೆ, ಅವಮಾನ, ಪಾಪಪ್ರಜ್ಞೆ, ಆತ್ಮನಿಂದನೆಯಿಂದ ಕುಗ್ಗಿ

ಹೋಗುವಂತೆ ಮಾಡಲಾಗುತ್ತಿದೆ. ಇವೆಲ್ಲ ಸೇರಿ ಇವರನ್ನು ಸುಲಭವಾಗಿ ಪೊಲೀಸರ ದೌರ್ಜನ್ಯಕ್ಕೆ ಗುರಿಯಾಗುವಂತೆ ಮಾಡಿದೆ.

ಆದ್ದರಿಂದ ಈಗ ಪೊಲೀಸ್ ಇಲಾಖೆ ಮತ್ತು ನ್ಯಾಯಾಂಗಕ್ಕೆ ಇದರ ಬಗ್ಗೆ ಅರಿವು ಮೂಡಿಸುವುದು ಮೊದಲನೆ ಹಂತವಾಗಿ ನಮ್ಮ ಕರ್ತವ್ಯವಾಗಿದೆ. ಈಗಿರುವ ಸೆಕ್ಷನ್ 377ರ ನೆವ ಹೇಳುತ್ತಾ ಶಂಕಿತ ಸಲಿಂಗಕಾಮಿಗಳನ್ನು ಬಂಧಿಸಲಾಗುತ್ತಿದೆ. ಈ ನಿಯಮವನ್ನು ರದ್ದುಪಡಿಸದಿದ್ದಲ್ಲಿ, ಅದು ಪೊಲೀಸರ ಕೈಯ್ಯಲ್ಲಿ ಅಪಾಯಕಾರೀ ಆಯುಧವಾಗಿ ಪರಿಣಮಿಸಬಹುದಾಗಿದೆ. ಇದನ್ನು ಉಪಯೋಗಿಸಿಕೊಂಡು ಅವರು ಜನರಿಗೆ ಕಿರುಕುಳ ಕೊಡಲು, ಹಿಂಸಿಸಲು, ಸುಲಿಗೆ ಮಾಡಲು, ಅದರಲ್ಲೂ ಇವರು ಸಲಿಂಗಕಾಮಿಗಳಾಗಿರಬಹುದು ಎನ್ನುವ ಶಂಕೆಯ ಆಧಾರದ ಮೇಲೆಯೇ ಹಿಂಸೆಯನ್ನು ಮುಂದುವರೆಸಬಹುದಾಗಿದೆ. ಈ ಕ್ರಮದ ಬಗ್ಗೆ ಸರ್ಕಾರ ಕುರುಡಾಗಿದ್ದರೆ, ಪೊಲೀಸರನ್ನು, ಸರ್ಕಾರದ ಪ್ರತಿನಿಧಿಗಳನ್ನು ನೇರ ಭೇಟಿಯಾಗಿ ಇದರತ್ತ ಗಮನ ಸೆಳೆಯುವುದು ಬರುವ ದಿನಗಳಲ್ಲಿ ಮುಖ್ಯವಾಗುತ್ತದೆ. ಆದರೆ ಸದ್ಯದಲ್ಲಿ ಅದು ಅಷ್ಟು ಅಗತ್ಯವಿಲ್ಲ ಎಂದು ನಿರ್ಧರಿಸಲಾಯಿತು.

ಈ ರೀತಿಯ ದೌರ್ಜನ್ಯದ ಕುರಿತು ವ್ಯಾಪಕ ಅರಿವು ಮೂಡಿಸುವ ಆಂದೋಳನವನ್ನು, ಯಾರು ಇದಕ್ಕೆ ಬಲಿಯಾಗಿರುತ್ತಾರೋ ಅವರು ಆರಂಭಿಸಬೇಕು. ಹಾಗೇ ಪ್ರತಿಯೊಬ್ಬರು ಇಂಥ ಗುಂಪಿಗೆ ಸೇರಿರಲಿ, ಇಲ್ಲದಿರಲಿ, ಮಾನವ ಹಕ್ಕು ಉಲ್ಲಂಘನೆಯ ವಿರುದ್ಧದ ಹೋರಾಟಕ್ಕಾಗಿ ಕೈಜೋಡಿಸಬೇಕು ಎಂಬ ಅಭಿಪ್ರಾಯ ಮೂಡಿ ಬಂತು.

ಈ ಸಭೆಯು ಕೆಳಕಂಡ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿತು.

* ಸಾರ್ವಜನಿಕ ಸ್ಥಳಗಳಲ್ಲಿ ಅಂದರೆ ಪೊಲೀಸರು ಕಿರುಕುಳ ಕೊಡಬಹುದಾದ ಸ್ಥಳಗಳಲ್ಲಿ ಇದರ ವಿರುದ್ಧ ಕರಪತ್ರ ಹಂಚಿ ಆಂದೋಲನ ಶುರು ಮಾಡುವುದು.
* ಈ ಪೊಲೀಸ್ ದೌರ್ಜನ್ಯ ನಿಲ್ಲಿಸಬೇಕೆಂದು ಆಗ್ರಹಿಸಿ ಸಹಿಸಂಗ್ರಹಣಾ ಆಂದೋಲನ ಮಾಡುವುದು.
* ತಕ್ಷಣವೇ ಈ ವಿಷಯಗಳ ಚರ್ಚೆಗಾಗಿ ಪೊಲೀಸ್ ಆಯುಕ್ತರ ಜೊತೆ ಭೇಟಿ ಏರ್ಪಡಿಸಿ ಸಹಿ ಸಂಗ್ರಹಣಾಪಟ್ಟಿ ಒಪ್ಪಿಸುವುದು.
* ಈ ಲೈಂಗಿಕ ಅಲ್ಪಸಂಖ್ಯಾತ ಗುಂಪುಗಳ ಮೇಲೆ ದೌರ್ಜನ್ಯ ಮಾಡಿ ಮಾನವಹಕ್ಕು ಉಲ್ಲಂಘಿಸಿದ ಎಲ್ಲ ಘಟನೆಗಳ ವಿವರ ಸಂಗ್ರಹಿಸಿ ದಾಖಲು ಮಾಡುವುದು.
* 377ನೇ ಕಲಮನ್ನು ತಕ್ಷಣ ರದ್ದು ಮಾಡಬೇಕೆಂದು ಆಗ್ರಹಿಸಿ ಆಂದೋಲನ ಪ್ರಾರಂಭಿಸುವುದು.

ನಮ್ಮಲ್ಲಿ ಕೆಲವರು ಈ ಆಂದೋಲನಗಳಿಗೆ 'ಗಣ್ಯವ್ಯಕ್ತಿಗಳ' ಸಹಕಾರ ಮತ್ತು ಪ್ರೋತ್ಸಾಹ ಗಳಿಸಬೇಕು ಎಂದು ಅಭಿಪ್ರಾಯ ಪಟ್ಟರು. ಕಲೆ, ಸಾಹಿತ್ಯ, ಶಿಕ್ಷಣ, ಪ್ರಚಾರ ಮಾಧ್ಯಮಗಳಲ್ಲಿರುವ ಜನಪ್ರಿಯ ವ್ಯಕ್ತಿಗಳನ್ನು ಸಂಪರ್ಕಿಸುವ ಜವಾಬ್ದಾರಿಯನ್ನು ಎಲ್ಲರೂ ಹಂಚಿಕೊಳ್ಳಬೇಕು ಎಂದು ತೀರ್ಮಾನವಾಯಿತು. ಹಾಗೇ ಸಹಿ ಸಂಗ್ರಹಣೆ ಕೂಡ ಒಂದು ಶಕ್ತಿಯುತ ಅಸ್ತ್ರ ಎಂದು ಭಾವಿಸಿ, ಸಾಮಾನ್ಯ ಜನರ ಸಹಿ ಸಂಗ್ರಹಣೆ ಮಾಡಬೇಕು ಎಂದು ಅಭಿಪ್ರಾಯ ಪಟ್ಟರು.

ಏಪ್ರಿಲ್ 22ರಂದು ಕರಪತ್ರ ಮುದ್ರಿತವಾಯಿತು. ಮರುದಿನ ಭಾನುವಾರ, 23ರಂದು ಹೊಸದಾಗಿ ರೂಪಿತವಾದ 'ಗೇ' ತಂಡ ಶ್ರೇಯ, 'ಸ್ನೇಹ', ಕೂಡ ಹೈಕೋರ್ಟ್‌ನ ಮುಂದೆ ಕರಪತ್ರ ಹಂಚುವಲ್ಲಿ ನಮ್ಮೊಡನೆ ಸೇರಿಕೊಂಡಿತು. ಅದರಲ್ಲೂ ಪೊಲೀಸ್ ದೌರ್ಜನ್ಯ ತೀವ್ರವಾಗಿರುವ ಕಬ್ಬನ್‌ಪಾರ್ಕ್ ಸುತ್ತುಮುತ್ತಲ ಪರಿಸರದಲ್ಲಿ 200 ಕರಪತ್ರಗಳನ್ನು ಹಂಚಲಾಯಿತು. ಈ ಕರಪತ್ರಗಳನ್ನು ಜನ ಉತ್ಸಾಹದಿಂದ ಓದಿಕೊಂಡರು. ಪ್ರಶ್ನೆಗಳು, ಅಭಿಪ್ರಾಯಗಳು ವ್ಯಕ್ತವಾದವು. ಒಬ್ಬ ವ್ಯಕ್ತಿ ಗೂಂಡಾಗಳು ಸಹ ಪೊಲೀಸರ ಜೊತೆ ಸೇರಿ ಬ್ಲಾಕ್‌ಮೇಲ್ ಮಾಡುವುದನ್ನು ವಿವರಿಸಿದ. ಇದರ ಕುರಿತು ನಮ್ಮೊಡನೆ ಚರ್ಚಿಸಲು ಅನೇಕ ಜನ ಕುತೂಹಲ ತೋರಿಸಿದರು, ಸಹಾಯ ಹಸ್ತ ಬಯಸಿದರು.

ಆ ದಿನವೇ ರಾತ್ರಿ ಸಭೆಯಲ್ಲಿ ಸೆಕ್ಷನ್ 377ನ್ನು ರದ್ದುಮಾಡಬೇಕೆಂದು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮನವಿ ಮಾಡಬಹುದೇ ಎಂದು ಚರ್ಚಿಸಲಾಯಿತು. ಅಲ್ಲದೇ ಇಂಥದೇ ಸಂದರ್ಭಗಳಲ್ಲಿ ದೆಹಲಿ ಹಾಗೂ ಮುಂಬಯಿಯಲ್ಲಿ ನಡೆದಿರುವ ಪ್ರತಿಭಟನೆಯನ್ನು ಎಲ್ಲರ ಗಮನಕ್ಕೆ ತರಲಾಯಿತು.

ಆ ಸಭೆಯಲ್ಲಿ ಚರ್ಚಿಸಲಾದ ಮುಖ್ಯ ವಿಷಯಗಳು :

* ಸೆಕ್ಷನ್ 377ನ್ನು ರದ್ದು ಮಾಡುವುದು ಅತ್ಯಗತ್ಯ ಎಂಬ ಒಮ್ಮತಕ್ಕೆ ಬರಲಾಯಿತು.
* ಸೆಕ್ಷನ್ 377ರ ವಿರುದ್ಧ ನ್ಯಾಯಾಲಯಕ್ಕೆ ಸಲ್ಲಿಸುವ ಅರ್ಜಿಗೆ ಎಲ್ಲ ಪ್ರಜಾಪ್ರಭುತ್ವ ಪರವಾದ, ಜನಪರ ಸಂಘಟನೆಗಳು, ಮಹಿಳಾ ಸಂಘಟನೆಗಳು, ಮಾನವ ಹಕ್ಕು ಸಂಘಗಳು, ಮಕ್ಕಳ ಮೇಲಿನ ಅತ್ಯಾಚಾರದ ವಿರುದ್ಧ ಹೋರಾಡುವ ಸಂಘಟನೆಗಳು ಜಂಟಿಯಾಗಿ ಹೋರಾಡಿದರೆ ಈ ಆಂದೋಲನ ಇನ್ನೂ ಶಕ್ತಿಯುತವಾಗುತ್ತದೆ.

* ಕಾನೂನುಬದ್ಧ ಹೋರಾಟದ ಜೊತೆಗೆ ಅರಿವು ಮೂಡಿಸುವ ಆಂದೋಳನ ಕೂಡ ನಡೆಯುತ್ತಿದ್ದರೆ ಮಾತ್ರ ಈ 377 ರದ್ದಾಗುವ ಬಗ್ಗೆ, ಸಾಮಾಜಿಕ ಹಾಗೂ ರಾಜಕೀಯ ರಂಗದಲ್ಲಿ ಒಳ್ಳೆಯ ಪ್ರೋತ್ಸಾಹಕರ ಅಭಿಪ್ರಾಯ ಮೂಡಲು ಸಾಧ್ಯ.

ಏಪ್ರಿಲ್ 26ರ ಸಭೆಯಲ್ಲಿ ಈ ಸೆಕ್ಷನ್ 377ರ ಬಗ್ಗೆ ಚರ್ಚೆ ಮುಂದುವರಿಸುವುದೆಂದು ತೀರ್ಮಾನವಾಯಿತು. ಮೇಲೆ ಪ್ರಸ್ತಾಪಿಸಿದಂಥ ಪ್ರಗತಿಪರ ಸಂಘಟನೆಗಳು ಕರಪತ್ರ ಹಂಚಿಕೆ, ಸಹಿ ಸಂಗ್ರಹಣೆ, ಪೊಲೀಸ್ ಆಯುಕ್ತರ ಭೇಟಿ ಮತ್ತು ಅವರೊಡನೆ ಚರ್ಚೆ, ಪ್ರತಿಭಟನೆಗೆ ಸಂಬಂಧಿಸಿದಂಥ ಇತರೆ ವಿಷಯಗಳು-ಸೆಕ್ಷನ್ 377ರ ವಿರುದ್ಧದ ಹೋರಾಟ ಇತ್ಯಾದಿಗಳ ಬಗ್ಗೆ ಒಂದು ಸ್ಪಷ್ಟ ತೀರ್ಮಾನ ತಳೆದು, ಈ ಹೋರಾಟದಲ್ಲಿ ಇತರೆ ಜನಪರ ಸಂಘಟನೆಗಳನ್ನೂ, ಎನ್.ಜಿ.ಓ.ಗಳನ್ನೂ ಸೇರಿಸಿಕೊಳ್ಳಬೇಕೆ ಬೇಡವೆ? ಸೇರಿಸಿಕೊಂಡರೆ ಈ ಸಮಸ್ಯೆ ತನ್ನ ತೀಕ್ಷ್ಣತೆ ಕಳೆದುಕೊಳ್ಳುವುದೆ? ಎಂಬ ಬಗ್ಗೆ ಚರ್ಚಿಸಲಾಯಿತು.

ಕರಪತ್ರ ಹಂಚಿಕೆ ಆಂದೋಲನ : ಇದನ್ನು ವಾರಕ್ಕೆರಡು ಬಾರಿ ಸಾರ್ವಜನಿಕ ಉದ್ಯಾನಗಳಲ್ಲಿ, ರಸ್ತೆಗಳಲ್ಲಿ ಮಾಡಬೇಕು ಎಂದು ತೀರ್ಮಾನವಾಯಿತು. ಕೆಲವು ಬಡಾವಣೆಗಳಲ್ಲಿ ಮಾತ್ರ ಹಂಚಬೇಕೆ? ಸಲಿಂಗಕಾಮಿಗಳು ಹೆಚ್ಚು ಇರುವ ಸ್ಥಳಗಳಲ್ಲಿ ಮಾತ್ರ ಮಾಡಬೇಕೆ? ಅಥವಾ ಇನ್ನೂ ವ್ಯಾಪಕವಾಗಿ ಮಾಡಬೇಕೆ? ಲೈಂಗಿಕ ರಾಜಕೀಯದ ಕುರಿತು ಪ್ರತ್ಯೇಕ ಕರಪತ್ರ ಹೊರಡಿಸಿ, ಸಾಮಾನ್ಯ ಜನರಿಗೆ ವಿತರಿಸಬೇಕೆ? ಈಗ ಇಂಥ ದೌರ್ಜನ್ಯದ ವಿರುದ್ಧ ಹೋರಾಡುತ್ತಿರುವ ಸಂಘಟನೆಗಳಲ್ಲೇ ಇದರ ಕುರಿತು ಏಕಾಭಿಪ್ರಾಯ ಇದೆಯೆ? ಎಂಬ ಮಹತ್ವದ ಪ್ರಶ್ನೆಗಳು ಚರ್ಚೆಗೆ ಬಂತು. ಕೊನೆಗೆ ಏಪ್ರಿಲ್ 30ರಂದು ಒಂದು ದಿನದ ಸಭೆ ನಡೆಸಿ ಈ ವಿಷಯದ ಬಗ್ಗೆ ಒಮ್ಮತಕ್ಕೆ ಬರಲು ಅಭಿಪ್ರಾಯ ವಿನಿಮಯ ಮಾಡಿಕೊಳ್ಳಲಾಯಿತು.

ಸಹಿಸಂಗ್ರಹಣಾ ಆಂದೋಲನ - ಸಹಿ ಸಂಗ್ರಹಣಾ ಆಂದೋಲನವನ್ನು ಸಧ್ಯಕ್ಕೆ ಪೊಲೀಸ್ ಆಯುಕ್ತರ ಭೇಟಿಯ ಜೊತೆ ತಳಕು ಹಾಕುವುದು ಬೇಡ ಎಂದು ನಿರ್ಧರಿಸಿದೆವು. ಈಗ ಸದ್ಯಕ್ಕೆ ನಮಗಿರುವ ಸೀಮಿತ ಶಕ್ತಿಯಲ್ಲಿ ಸಹಿ ಸಂಗ್ರಹಣಾ ಆಂದೋಲನವನ್ನು ಮುಂದೂಡಿ, ಸೆಕ್ಷನ್ 377 ರದ್ದಾಗುವುದನ್ನೇ ಮುಖ್ಯ ಗುರಿಯಾಗಿಸಿಕೊಳ್ಳಬೇಕು ಎಂಬ ನಿರ್ಧಾರಕ್ಕೆ ಬಂದೆವು.

ಪೊಲೀಸ್ ಆಯುಕ್ತರ ಭೇಟಿ : ಸಾಧ್ಯವಾದಷ್ಟು ಬೇಗ ಪೊಲೀಸ್ ಆಯುಕ್ತರನ್ನು ಭೇಟಿಯಾಗಬೇಕು. PUCL Karnatakaವನ್ನು ಸಂಪರ್ಕಿಸಿ ಆಯುಕ್ತರ ಜೊತೆ ಭೇಟಿ ಏರ್ಪಡಿಸಬೇಕು. ಎಲ್ಲ ಸಂಘಟನೆಗಳೂ ಈ ಭೇಟಿಗೆ ತಮ್ಮ ಪ್ರತಿನಿಧಿಗಳನ್ನು ಕಳಿಸಿಕೊಡಬೇಕು ಎಂದು ತೀರ್ಮಾನಿಸಲಾಯಿತು.

ಆಂದೋಲನ ಕಾರ್ಯಕ್ರಮಕ್ಕೆ ಸಂಬಂಧಿಸಿದ ಕೆಲವು ವಿಷಯಗಳು : ಇದಕ್ಕೆ ಸಂಬಂಧಿಸಿದಂತೆ ಬೇಕಾಗುವ ಹಣದ ಬಗ್ಗೆ ಇದುವರೆಗೆ ಚರ್ಚಿಸಿರಲಿಲ್ಲ. ಕರಪತ್ರ ಮುದ್ರಣಕ್ಕೆ 800 ರೂ. ವೆಚ್ಚವಾಯಿತು ಎಂದು 'ಸಂಗಮ' ತಿಳಿಸಿತು. ಎಲ್ಲರೂ ಸೇರಿ ಈ ವೆಚ್ಚವನ್ನು ಭರಿಸಬೇಕು ಎಂದು ನಿರ್ಧರಿಸಿದೆವು. ಈ ಕುರಿತು ಪತ್ರಕರ್ತರನ್ನು ಸಂಪರ್ಕಿಸಬೇಕೆ ಬೇಡವೆ? ಸಮಾಜದ ಇತರ ವ್ಯಕ್ತಿಗಳಿಗೆ ಇದರ ಬಗ್ಗೆ ತಿಳುವಳಿಕೆ ಮೂಡಿಸುವುದು ಹೇಗೆ? ಇತ್ಯಾದಿ ವಿಷಯಗಳನ್ನು ಏಪ್ರಿಲ್ 30ರ ಸಭೆಯಲ್ಲಿ ಚರ್ಚಿಸುವುದೆಂದು ತೀರ್ಮಾನಿಸಲಾಯಿತು.

ಸೆಕ್ಷನ್ 377ರ ರದ್ಧತಿ : PUCL - Karnatakaದ ಪ್ರತಿನಿಧಿಯೊಬ್ಬರು, ಹಿರಿಯ ವಕೀಲರೂ, ಮಾನವ ಹಕ್ಕು ಕಾರ್ಯಕರ್ತರೂ ಆದ ಕೆ. ಜಿ. ಕಣ್ಣಬೀರನ್‌ರವರ ಜೊತೆ ತಾವು ನಡೆಸಿದ ಅನೌಪಚಾರಿಕ ಚರ್ಚೆಯನ್ನು ಪ್ರಸ್ತಾಪಿಸುತ್ತ ಸೆಕ್ಷನ್ 377 ರದ್ದಾಗುವಂತೆ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮೊರೆ ಹೋದಲ್ಲಿ ಆಗುವ ಸಾಧ್ಯಾಸಾಧ್ಯತೆಗಳನ್ನು ಕುರಿತು ಹೇಳಿದರು. ದೆಹಲಿ ಮತ್ತು ಮುಂಬಯಿಯಲ್ಲಿ 'ಸಲಿಂಗಕಾಮ'ವು ಸಾಕಷ್ಟು ಗಮನ ಸೆಳೆದಿದೆ. ಆದರೆ ಬೆಂಗಳೂರಲ್ಲಿ ಸಾಮಾಜಿಕವಾಗಿ, ರಾಜಕೀಯವಾಗಿ ಇದರತ್ತ ಇನ್ನೂ ಮಾನವೀಯ ದೃಷ್ಟಿ ಮೂಡಬೇಕಾಗಿದೆ. ಇಂಥ ಸಂಬಂಧಗಳ ಪರವಾದ ಯಾವುದೇ ಹೋರಾಟ ಹತ್ತಿಕ್ಕಲ್ಪಡುತ್ತದೆ. ಏಕೆಂದರೆ ಭಾರತಕ್ಕೆ ಇತರ ದೇಶಗಳಿಂದ 'ಸಲಿಂಗಕಾಮ'ಕ್ಕೆ ಸಂಬಂಧಪಟ್ಟ ಕಾಯಿದೆಗಳನ್ನು ನಾಶಪಡಿಸಲು ಒತ್ತಡವಿದೆ. ದ್ವಿಪಕ್ಷೀಯ ಮಾತುಕತೆಗಳಿಂದ, ಭಾರತವು ಏಡ್ಸ್ ನಿರ್ನಾಮಕ್ಕಾಗಿ, ಎಲ್ಲಿಂದ ಹಣ ಪಡೆಯುತ್ತಿದೆಯೋ ಆ ದೇಶಗಳು ಇಂಥ ಷರತ್ತುಗಳನ್ನು (ಅಂದರೆ ಇಂಥ ಸಂಬಂಧಗಳನ್ನು ಪ್ರೋತ್ಸಾಹಿಸದಂತೆ) ಭಾರತದ ಮೇಲೆ ಹೇರಿವೆ. ಚರ್ಚೆಯಲ್ಲಿ ಇನ್ನೂ ಹಲವು ವಿಷಯಗಳು ಬಂದವು. ಒಂದು ವೇಳೆ ಸೆಕ್ಷನ್ 377ನ್ನು ರದ್ದುಪಡಿಸಬೇಕೆಂದು ಒತ್ತಾಯಪಡಿಸಿದ ಪಕ್ಷದಲ್ಲಿ CSA (Child Sexual Abuse)ನವರು, ಅಪ್ರಾಪ್ತ ವಯಸ್ಸಿನವರ ಮೇಲೆ ನಡೆಯುವ ಅತ್ಯಾಚಾರದ ವಿರುದ್ಧ ಇರುವುದು ಇದೊಂದೇ ಕಾಯಿದೆ ಯಾದ್ದರಿಂದ, ಇದಕ್ಕೆ ಸಹಕಾರ ನೀಡದಿರಬಹುದು. ಆಗ ವಿಷಯ ಸಂಕೀರ್ಣವಾಗುತ್ತದೆ. ಆದ್ದರಿಂದ ಇಂಥ ಸಂಘಟನೆಗಳ ಜೊತೆ ಸಂವಾದ ಏರ್ಪಡಬೇಕು. ಅಲ್ಲದೆ, ಸೆಕ್ಷನ್ 377 ರದ್ದು

ಮಾಡುವುದರ ಬಗ್ಗೆ ವಕೀಲರ ಅಭಿಪ್ರಾಯವನ್ನು ಪಡೆಯಬೇಕು ಎಂದು ತೀರ್ಮಾನಿಸಲಾಯಿತು.

ಏಪ್ರಿಲ್ 29ರಂದು ಮಾನಸ, Good as you, PUCL - Karnataka, Sabrang ಎಲ್ಲ ಸಂಘಟನೆಗಳೂ ಒಟ್ಟಾಗಿ ಸೇರಿ ಪೊಲೀಸ್ ಆಯುಕ್ತರನ್ನು ಭೇಟಿಯಾದವು. ಅವರ ಪ್ರತಿಕ್ರಿಯೆ ಆಶಾದಾಯಕವಾಗಿತ್ತು. ನಾವು ಪೊಲೀಸ್ ದೌರ್ಜನ್ಯದ ಸಂಪೂರ್ಣ ಮಾಹಿತಿ ಒಳಗೊಂಡ ಮನವಿಯನ್ನು ಅವರಿಗೆ ಒಪ್ಪಿಸಿ ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕು ಎಂದು ವಿನಂತಿಸಿದೆವು. ಪೊಲೀಸರ ಸ್ವೇಚ್ಛಾವರ್ತನೆ ಹಾಗೂ ಕಾನೂನುಬಾಹಿರ ನಡವಳಿಕೆಗಳ ಬಗ್ಗೆ ಆಯುಕ್ತರ ಗಮನ ಸೆಳೆಯಲಾಯಿತು. ನಗರವನ್ನು 'ಶುದ್ಧಿಗೊಳಿಸುವ' ನೆಪದಲ್ಲಿ ಅಮಾಯಕರನ್ನು ಹಿಂಸಿಸುವ ಈ ಕ್ರಮ ನಿಲ್ಲಬೇಕು. ಬರೀ ಶಂಕೆಯ ಆಧಾರದ ಮೇಲೆ ಜನರನ್ನು ಬಂಧಿಸಬಾರದು ಎಂದಾಗ ಆಯುಕ್ತರು ತಾವು 'ನಗರ ಶುದ್ಧಿಗೊಳಿಸುವ' (Clean-up drive) ಯಾವುದೇ ಸಾರ್ವಜನಿಕ ಹೇಳಿಕೆಯಾಗಲೀ, ಆದೇಶವಾಗಲೀ ನೀಡಿಲ್ಲ. ಒಂದು ವೇಳೆ ಇಂಥ ಕೃತ್ಯಗಳು ಮುಂದುವರೆದಲ್ಲಿ, ಫೋನ್ ಮೂಲಕ ನೇರವಾಗಿ ತಮಗೆ ಅದನ್ನು ತಿಳಿಸಬೇಕು ಎಂದು ಪ್ರತಿಕ್ರಿಯಿಸಿದರು.

ಏಪ್ರಿಲ್ 30ರಂದು Alternative Law Forces, ಗೆಳೆಯ, Good as you, ಜಾಗೃತಿ, ಮಾನಸ, ಸಬ್‌ರಂಗ್, ಸಂಗಮ, ಸ್ನೇಹ, ಶ್ರೇಯ ಮತ್ತು ಸ್ವಭಾವ ಗುಂಪುಗಳ ಕೆಲವು ಸದಸ್ಯರು ಭೇಟಿಯಾಗಿ ಹಲವಾರು ವಿಷಯಗಳನ್ನು ಚರ್ಚಿಸಿದರು. ಸಲಿಂಗ ಕಾಮಕ್ಕೆ ಸಂಬಂಧಿಸಿದ ಕೆಲವು ಮಿಥ್‌ಗಳನ್ನು ಚರ್ಚಿಸಲಾಯ್ತು, ಸಲಿಂಗ ಕಾಮದೊಂದಿಗೆ, ತಂದೆ ತಾಯಿಯರ ಪ್ರೀತಿಯ ಕೊರತೆ, ಅನುವಂಶೀಯವಾಗಿ ಬರುವ ಖಾಯಿಲೆ, ಬೆರಳಿನ ಉದ್ದ (!!!) ಇತ್ಯಾದಿ ವಿಷಯಗಳೊಂದಿಗೆ ಸಂಬಂಧ ಕಲ್ಪಿಸುವ ಥಿಯರಿಗಳನ್ನು ಕುರಿತು ಚರ್ಚಿಸಲಾಯ್ತು. ಇಂತಹ ಥಿಯರಿಗಳು ಸಲಿಂಗಕಾಮ ಒಂದು ಹಾದಿ ತಪ್ಪಿದ ಕ್ರಮ ವಾದ್ದರಿಂದ ಅದನ್ನು ವಿವರಿಸುವ ಅಗತ್ಯವಿದೆಯೆಂದು ಪ್ರತಿಪಾದಿಸುತ್ತವೆ. ಆದರೆ ವಿರುದ್ಧ ಲಿಂಗ ಸಂಬಂಧಗಳನ್ನು ಪ್ರಶ್ನಿಸುವುದೇ ಇಲ್ಲ. ವೈಜ್ಞಾನಿಕ ಸಿದ್ಧಾಂತ, ಕ್ರಮಗಳನ್ನೆ ಚರ್ಚೆಯಲ್ಲಿ ಟೀಕಿಸಲಾಯ್ತು.

ನಂತರ ಆಂದೋಳನದ ರೂಪುರೇಷೆಯ ಬಗ್ಗೆ ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.

* ಅಪ್ರಾಪ್ತ ವಯಸ್ಸಿನ ಬಾಲಕ ಬಾಲಕಿಯರ ಮೇಲಿನ ಅತ್ಯಾಚಾರ ಚರ್ಚೆಗೆ ಬಂದಿತು. ಯಾವುದೇ ಲೈಂಗಿಕ ಚಟುವಟಿಕೆಗೆ ತೊಡಗಲು ಸಮ್ಮತಿ ನೀಡುವ ಮುನ್ನ ವಯೋಮಿತಿ 18 ಆಗಿರಬೇಕು ಎಂದು ನಿಯಮ ಮಾಡಬೇಕು.
* ಪ್ರತಿ ಬಾರಿ ಸೆಕ್ಷನ್ 377ನ್ನು ರದ್ದುಮಾಡಿ ಎಂದು ಕೇಳುವಾಗ ಅತ್ಯಾಚಾರಕ್ಕೆ ಸಂಬಂಧಿಸಿದ ಕಾಯಿದೆ ರೂಪಿಸು ವವರು ಅಪ್ರಾಪ್ತ ವಯಸ್ಸಿನ ಬಾಲಕ/ಬಾಲಕಿಯರ ಮೇಲಿನ ಅತ್ಯಾಚಾರದ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಒತ್ತಾಯಿಸುವುದು.
* ಬಾಲಕ/ಬಾಲಕಿಯರ ಮೇಲಿನ ಲೈಂಗಿಕ ದುರ್ವರ್ತನೆ ಅಥವಾ ಅತ್ಯಾಚಾರ ಮಾಡುವುದು, ತೀವ್ರ ಅಸಮಾನತೆ ಹಾಗೂ ದಮನಕಾರೀ ಸಮಾಜ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಅಧಿಕಾರದ ದುರುಪಯೋಗವಾಗಿದೆ. ಇಂಥವರನ್ನು ಯಾವುದೇ ಸಂಘಟನೆಗಳಲ್ಲಿ ಸೇರಿಸಿಕೊಳ್ಳಬಾರದು ಹಾಗೂ ಅವರನ್ನು ತೀವ್ರವಾಗಿ ಖಂಡಿಸಬೇಕು.
* ಮಾಧ್ಯಮಗಳು, ಸಾಮಾಜಿಕ ರೀತಿ ನೀತಿಗಳು ಹೆಣ್ಣಿಗೆ ನೀಡಿರುವ, ಸೌಂದರ್ಯದ ಒಂದು ಇಮೇಜು, ಹೆಣ್ಣನ್ನು ಒಂದು 'ವಸ್ತು'ವಾಗಿಸಿಬಿಡುತ್ತದೆ. ಸೌಂದರ್ಯವರ್ಧಕಗಳ ತಯಾರಕರಿಗೆ ಅವರದೇ ಆದ ಲಾಭದಾಯಕ ಆಸಕ್ತಿಗಳಿದ್ದು, ಹೆಣ್ತನದ ಜೊತೆಗೆ 'ಸೌಂದರ್ಯ' ಅವಿಭಾಜ್ಯ, ಅನಿವಾರ್ಯ ಎನ್ನುವಂತೆ ತೋರಿಸಿ, ಪ್ರತಿಯೊಬ್ಬರೂ ತಮ್ಮ ದೇಹದ ಆಳತೆಯ ಬಗ್ಗೆಯೇ ಚಿಂತಿಸುವಂತೆ ಮಾಡಿದ್ದಾರೆ. ಸಲಿಂಗ ಕಾಮಿಗಳಿಗೆ, ಹಿಜಿಡಾಗಳಿಗೆ ಈ ಸಂಕೇತಗಳು ಏನನ್ನಿಸಬಹುದು (ಸೌಂದರ್ಯ ಸಾಮಗ್ರಿಗಳು, ಮೊಲೆಯೇ ಹೆಣ್ತನದ ಹಿರಿಮೆ ಎಂಬ ಪ್ರತಿಪಾದನೆ) ಅಂದರೆ ಯಾವುದನ್ನು ಸ್ತ್ರೀವಾದಿಗಳು ವಿರೋಧಿಸುತ್ತಿದ್ದಾರೋ, ವಾಣಿಜ್ಯ ಪ್ರಪಂಚ ಲಾಭದ ದೃಷ್ಟಿಯಿಂದ ಅದನ್ನೇ ಎತ್ತಿ ಹಿಡಿಯುತ್ತಿದೆ ಅದೇ ಬಂಡವಾಳಶಾಹಿ, ಪಿತೃಪ್ರಧಾನ ಮೌಲ್ಯಗಳನ್ನು ಮುಂದುವರೆಸುತ್ತಿದೆ. ಇದರ ಬಗ್ಗೆ ಇನ್ನೂ ವ್ಯಾಪಕ ಚರ್ಚೆಯಾಗಬೇಕು.
* ಆಂದೋಳನದ ಕುರಿತು ಮಾಹಿತಿ, ವಿವರಗಳನ್ನು ಕಾಲ ಕಾಲಕ್ಕೆ ದೇಶದ ಇನ್ನಿತರ ಸಂಘಟನೆಗಳಿಗೆ ಹಾಗೂ ವಿದೇಶದ ಸಂಘಗಳಿಗೆ ಕಾಲಕಾಲಕ್ಕೆ ಕಳಿಸಬೇಕು. ಆದರೆ ಇದರಲ್ಲಿ ಯಾವುದೇ ವ್ಯಕ್ತಿಯ ಹೆಸರು ಮುಖ್ಯವಾಗಬಾರದು. ತಂಡಗಳ ಹೆಸರನ್ನು ಬೇಕಾದರೆ ಪ್ರಸ್ತಾಪಿಸಬಹುದು.

* ನಮ್ಮದು ಆಂದೋಳನ ತಂಡವೋ ಅಥವಾ ಸಮ್ಮಿಶ್ರ ಗುಂಪುಗಳ ಒಕ್ಕೂಟವೋ ಎಂದು ಮುಂದಿನ ಸಭೆಯಲ್ಲಿ ತೀರ್ಮಾನವಾಗಬೇಕು. ಸದ್ಯಕ್ಕಂತೂ ನಾವು ಹೆಸರಿಲ್ಲದವರು!
* ಲೈಂಗಿಕ ರಾಜಕೀಯದ ಬಗ್ಗೆ ಒಂದು ಸಾರ್ವಜನಿಕ ಸಭೆ, ಮೇ ತಿಂಗಳ ಕೊನೆಯಲ್ಲಿ ಕರೆದು, ಅದರಲ್ಲಿ ಎಲ್ಲ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸುವುದು. ಸಾಧ್ಯವಾದರೆ ಇದನ್ನು ಕುರಿತ ಯಾವುದಾದರೂ ಚಿತ್ರಪ್ರದರ್ಶನ ಏರ್ಪಡಿಸುವುದು.
* ಈ ಹಂತದಲ್ಲಿ ಪತ್ರಕರ್ತರನ್ನು ಭೇಟಿಯಾಗದೆ, ನಮ್ಮ ನಮ್ಮಲ್ಲಿ ಈ ಸಮಸ್ಯೆಗಳ ಬಗ್ಗೆ ಇನ್ನೂ ಖಚಿತವಾದ ರೂಪ ಬಂದಾಗ ಮಾಧ್ಯಮಗಳನ್ನು ಸಂಪರ್ಕಿಸಿ, ಈ ಆಂದೋಲನದ ಬಗ್ಗೆ ಪ್ರಚಾರ ಮಾಡಬಹುದೆಂದು ತೀರ್ಮಾನಿಸಲಾಯಿತು.
* ಮೂಲಭೂತ ಸಮಸ್ಯೆಗಳ ಬಗ್ಗೆ ನಮ್ಮ ನಮ್ಮಲ್ಲಿ ಕನಿಷ್ಠ ಸಹಮತವಿರಬೇಕು. ಒಂದು ಆಂದೋಳನದ ತಂಡವಾಗಿ ಲೈಂಗಿಕ ಅಲ್ಪಸಂಖ್ಯಾತರ ಪರವಾಗಿ ಹೋರಾಡುವಾಗ ಬಂಡವಾಳಶಾಹಿ ಸಮಾಜ, ಮೂಲಭೂತವಾದ, ಕೋಮುವಾದ, ಜಾತಿವಾದ, ಲಿಂಗಾಧಾರಿತ ಅಸಮಾನತೆ ಮುಂತಾದ್ದರ ಬಗ್ಗೆಯೂ ನಮ್ಮ ನಿಲುವು ಸ್ಪಷ್ಟವಾಗಿರಬೇಕು. ಸಹಮತವಿರಬೇಕು ಎಂದು ನಿರ್ಧರಿಸಲಾಯಿತು.
* ಇವೆಲ್ಲವನ್ನು ಕುರಿತ ಲೆಕ್ಕಪತ್ರಗಳನ್ನು ಸರಿಯಾಗಿಡಬೇಕು ಮತ್ತು ಕಾಲಕಾಲಕ್ಕೆ ಇದರ ವಿವರಗಳನ್ನು ಎಲ್ಲರಿಗೂ ನೀಡಬೇಕು.

ಏಪ್ರಿಲ್ 30ರಂದೂ ಕೂಡ ಆಂದೋಳನ ಮುಂದು ವರೆಯಿತು. ಮಾನಸ, Good as you, ಸಬ್ರಂಗ್ ಮುಂತಾದ ಸಂಘಟನೆಗಳು ಕೆ. ಆರ್. ಪಾರ್ಕ್ ಮತ್ತು ಕಬ್ಬನ್ ಪಾರ್ಕಿನಲ್ಲಿ ಕರಪತ್ರಗಳನ್ನು ಹಂಚಿದುವು. ಇದಕ್ಕೆ ಎಂದಿನಂತೆ ಪ್ರತಿಕ್ರಿಯೆ ಅದ್ಭುತ ಯಶಸ್ಸಿನಿಂದ ಕೂಡಿತ್ತು.

ವರದಿ - ನೀಲಾಂಜನ
ಕನ್ನಡಕ್ಕೆ - ಮಧು

ಕರಪತ್ರವನ್ನು ಓದುಗರಿಗಾಗಿ ಪ್ರಕಟಿಸಿದ್ದೇವೆ

ಪೊಲೀಸ್ ದೌರ್ಜನ್ಯವನ್ನು ವಿರೋಧಿಸುವ ಲೈಂಗಿಕತೆ ಶೋಷಿತರು (ಸಲಿಂಗ ಕಾಮಿಗಳು, ದ್ವಿಲಿಂಗ ಕಾಮಿಗಳು, ಹಿಜ್ರಾಗಳು, ಲಿಂಗ ಬದಲಾಯಿಸಿಕೊಳ್ಳುವವರು)

ಸಲಿಂಗ ಕಾಮಿಗಳು ಹಾಗೂ ಇತರೆ ಲೈಂಗಿಕತೆ ಶೋಷಿತರ ಮೇಲಿನ ಪೊಲೀಸ್ ದೌರ್ಜನ್ಯ ಬೆಂಗಳೂರಿನಲ್ಲಿ ಇತ್ತೀಚೆಗೆ ಹೆಚ್ಚಾಗುತ್ತಿವೆ. ಬೆದರಿಕೆ, ಹೊಡೆತ ಹಣ ಕೀಳುವುದು ಪೊಲೀಸರ ಅಸ್ತ್ರವಾಗಿದೆ. ನಮಗೆ ಲಭ್ಯವಿರುವ ಕೆಲವೇ ಸಾರ್ವಜನಿಕ ಸ್ಥಳ (ಪಾರ್ಕ್)ಗಳು ಭಯದ ತಾಣವಾಗಿಬಿಟ್ಟಿದೆ. ನಮಗಿರುವ ಸ್ಥಳಾವಕಾಶವನ್ನು ಮತ್ತೆ ಪಡೆದುಕೊಂಡು ನಮ್ಮ ಹಕ್ಕುಗಳಿಗಾಗಿ ಹೋರಾಡ ಬೇಕಾಗಿದೆ.

ನಮ್ಮನ್ನು ಬೆದರಿಸುವ, ಹೊಡೆಯುವ, ಹಣಕೀಳುವ ಯಾವುದೇ ಅಧಿಕಾರ ಪೊಲೀಸರಿಗಿಲ್ಲ. ಅದರೂ ಸರ್ವ ಸ್ವತಂತ್ರರಾಗಿ ಈ ಕಾನೂನು ಬಾಹಿರ ಕಾರ್ಯಗಳಲ್ಲಿ ಪೊಲೀಸರು ತೊಡಗಿದ್ದಾರೆ. ಈ ಅಧಿಕಾರವನ್ನು ಅವರಿಗೆ ಕೊಟ್ಟಿದ್ದು ಯಾವುದು? ಸಲಿಂಗ ಕಾಮಿಗಳ ಬಗ್ಗೆ ಇರುವ ಮಿಥ್, ಪೂರ್ವಾಗ್ರಹಗಳು, ಹಾಗು ಹಳೆಯ ಕಾನೂನನ್ನು ಬಳಸಿಕೊಂಡು ಪೊಲೀಸರು ನಮ್ಮನ್ನು ಬೆದರಿಸುತ್ತಿದ್ದಾರೆ.

ಸಲಿಂಗ ಕಾಮಿಗಳ ಬಗ್ಗೆ ಇರುವ ಕೆಲವು ಮಿಥ್‌ಗಳು :

* ಇದು ಅಸ್ವಾಭಾವಿಕ
* ಇದು ಪಶ್ಚಿಮದ ಪ್ರಭಾವ

* ಇದೊಂದು ಮೇಲ್ವರ್ಗದ, ನಗರಕ್ಕೆ ಸಂಬಂಧಿಸಿದ ವಿಷಯ

* ಇದೊಂದು ಖಾಯಿಲೆಯಾಗಿದ್ದು ಅದನ್ನು ಸರಿಪಡಿಸುವ ಅಗತ್ಯವಿದೆ; ಇದು ತಪ್ಪು ದಾರಿಯಾಗಿದ್ದು ಅದನ್ನು ಸರಿಪಡಿಸುವ ಅಗತ್ಯವಿದೆ.

ಹೆಂಗಸು-ಹೆಂಗಸಿನೊಂದಿಗೆ, ಗಂಡಸು-ಗಂಡಸಿನೊಂದಿಗೆ ಹಾಗೂ ಹೆಂಗಸು-ಗಂಡಸಿನೊಂದಿಗೆ ಲೈಂಗಿಕ ಸಂಬಂಧವಿರುವುದು ನಮ್ಮ ಅನುಭವಗಳಿಂದ ತಿಳಿದಿದೆ. ಎಲ್ಲಾ ಜಾತಿ, ವರ್ಗಗಳಲ್ಲೂ, ಹಳ್ಳಿ ನಗರಗಳಲ್ಲೂ ಸಲಿಂಗ ಕಾಮದ ಸಂಬಂಧಗಳಿವೆಯೆಂದು ನಮಗೆ ತಿಳಿದಿದೆ. ನಮ್ಮ ಸಾಂಪ್ರದಾಯಕ ದೇವಾಲಯಗಳ ಶಿಲ್ಪಗಳು (ಉದ್ಧಾ: ಖಜುರಾಹೋ) ಸಲಿಂಗ ಕಾಮ ಕುರಿತು ಹೇಳುತ್ತವೆ. ನಮ್ಮ ಪ್ರಾಚೀನ ಗ್ರಂಥವಾದ ಕಾಮಸೂತ್ರವು ಸಲಿಂಗ ಕಾಮಕ್ಕೆ ಧರ್ಮಶಾಸ್ತ್ರಗಳಲ್ಲಿ ಒಪ್ಪಿಗೆ ಪಡೆದಿತ್ತೆಂಬುದನ್ನು ಕುರಿತು ಹೇಳುತ್ತದೆ. ನಮ್ಮ ಸಾಂಪ್ರದಾಯಿಕ ಆಚರಣೆಗಳಾದ ಜೋಗತಿ, ಜೋಗಪ್ಪ, ಹಿಜಡಾ, ಶಿವಶಕ್ತಿ ಮತ್ತು ತಂತ್ರಗಳು ಸಲಿಂಗಕಾಮವನ್ನು ನೂರಾರು ವರ್ಷಗಳಿಂದ ಆಚರಿಸುತ್ತಾ ಬಂದಿವೆ.

ಸಲಿಂಗ ಕಾಮವು ಪಶ್ಚಿಮದ ಪ್ರಭಾವವಲ್ಲ. ಬ್ರಿಟಿಷ್ ದೊರೆಗಳು ಸಲಿಂಗ ಕಾಮವನ್ನು ಅಪರಾಧಿಕರಣಗೊಳಿಸಿ 1860ರಲ್ಲಿ ಸೆಕ್ಷನ್ 377 ಕಾನೂನನ್ನು ಭಾರತೀಯ ದಂಡ ಸಂಹಿತೆ (IPC)ಯಲ್ಲಿ ಅಳವಡಿಸಿದರು. ಈ ಕಾನೂನು ಗುದ ಸಂಭೋಗವನ್ನು ಅಪರಾಧವೆಂದು ಪರಿಗಣಿಸುತ್ತದೆ. ಈ ಕಾನೂನಿನ ಉಪಯೋಗ ಪಡೆದುಕೊಂಡ ಪೊಲೀಸರು ಸಾರ್ವಜನಿಕ ಸ್ಥಳಗಳಲ್ಲಿ ಒಂದೇ ಲಿಂಗದ ಇಬ್ಬರು ಕೈಹಿಡಿದುಕೊಂಡು ನಿಲ್ಲುವುದನ್ನು, ಮಾತನಾಡುವವರನ್ನೂ ಸಹ ಹಿಂಸಿಸುತ್ತಿದ್ದಾರೆ. ಸೆಕ್ಷನ್ 377ರ ಅಡಿಯಲ್ಲಿ ಅರೆಸ್ಟ್ ಆಗಿರುವುದೇ ವಿರಳ. ಈ ಕಾನೂನು ಪೊಲೀಸರಿಗೆ ಅಧಿಕಾರ ನೀಡಿ ನಮ್ಮ ಹಕ್ಕನ್ನು ಕಿತ್ತುಕೊಳ್ಳುತ್ತಿದೆ.

ಹೆಚ್ಚು ಕಡಿಮೆ ನಮ್ಮ ದೇಶದ ವೈದ್ಯಕೀಯ ವ್ಯವಸ್ಥೆಯು ಸಲಿಂಗ ಕಾಮವನ್ನು ಖಾಯಿಲೆ ಎಂದು ಪರಿಗಣಿಸಿ, ಎಲೆಕ್ಟ್ರಿಕ್ ಶಾಕ್ ನೀಡುವುದರ ಮೂಲಕ ಮಾನಸಿಕ ಅಸ್ವಸ್ಥೆಯ ಔಷಧಗಳನ್ನು ನೀಡುವ ಮೂಲಕ, ಆ ಬಗ್ಗೆ ಅಸಹ್ಯ ಹುಟ್ಟಿಸುವ ಥೆರಪಿಗಳ ಮೂಲಕ ಸರಿಪಡಿಸಬಹುದೆಂದು ಭಾವಿಸುತ್ತದೆ. ಜೈಲು ಆಸ್ಪತ್ರೆ, ನ್ಯಾಯಾಲಯ ಮತ್ತು ಸಮೂಹ ಒಟ್ಟಾರೆ ಸಂಚು ನಡೆಸಿ ನಮ್ಮ ಮನಸ್ಸಿನಲ್ಲಿ ನಾವು ರೋಗಿಗಳು, ದುರ್ಮಾರ್ಗಿಗಳು, ನೀತಿಗೆಟ್ಟವರು, ಅಸಹಜರು ಎಂಬ ಭಾವನೆಯನ್ನು ಹುಟ್ಟಿಸುತ್ತದೆ. ಸಾಮಾಜಿಕ ನಿಯಮವನ್ನು ಬಿಟ್ಟು ನಮ್ಮದೆ ರೀತಿಯಲ್ಲಿ ಲೈಂಗಿಕತೆಯನ್ನು ಹೊಂದುವುದು ನಮ್ಮಲ್ಲೇ ಅನುಮಾನ, ಪಾಪಪ್ರಜ್ಞೆ, ನಮ್ಮನ್ನೆ ದ್ವೇಷಿಸಿಕೊಳ್ಳುವುದನ್ನು ಹುಟ್ಟುಹಾಕುತ್ತದೆ. ನಮಗೆ ನಾವೇ ಮೋಸ ಮಾಡಿಕೊಂಡ ದ್ವಂದ್ವ ಬದುಕನ್ನು ನಡೆಸುವಂತೆ ಮಾಡುತ್ತದೆ. ನಮ್ಮ ಬಗ್ಗೆ ನಾವೇ ಅಗೌರವಿಸಿಕೊಳ್ಳುತ್ತಾ, ಮಾನಸಿಕ ಖಿನ್ನತೆಯನ್ನು ಬೆಳಸಿಕೊಳ್ಳುತ್ತೇವೆ. ಈ ಖಿನ್ನತೆಯಿಂದ ನಮ್ಮಲ್ಲಿ ಕೆಲವರು ಆತ್ಮಹತ್ಯೆಯ ದಾರಿ ಹಿಡಿಯುವುದುಂಟು.

ಖಾಯಿಲೆ ಇರುವುದು ನಮ್ಮಲ್ಲಿ ಅಲ್ಲ, ಸಲಿಂಗ ಕಾಮವನ್ನು ಅಪರಾಧೀಕರಣಗೊಳಿಸುವ ಸಮಾಜದಲ್ಲಿದೆ. ಎಷ್ಟೋ ದೇಶಗಳಲ್ಲಿ ಕಾನೂನುಗಳು ಬದಲಾಗಿ ಸಲಿಂಗಕಾಮ ಒಪ್ಪಿತವಾಗಿದೆ. ಅಂತರಾಷ್ಟ್ರೀಯ ಸಂಸ್ಥೆಯಾದ ಜಾಗತೀಕ ಆರೋಗ್ಯ ಸಂಸ್ಥೆ (W.H.O) ಮತ್ತು ಅಮೇರಿಕಾದ ಮಾನಸಿಕ ಆರೋಗ್ಯ ಸಂಸ್ಥೆಯು (American Phychiatric Association) ಸಲಿಂಗ ಕಾಮವನ್ನು ಸಹಜ ಅಭ್ಯಾಸವೆಂದು ಪರಿಗಣಿಸಿದೆ. ನಿರಂತರ ಹೋರಾಟಗಳಿಂದಾಗಿ ಈ ಬದಲಾವಣೆ ಸಾಧ್ಯವಾಯಿತು.

ನಾವೀಗ ಸಂಘಟಿತರಾಗುವ ಸಮಯ ಬಂದಿದೆ. ಖಚಿತವಾಗಿ ನಾವು -

* ನಮ್ಮನ್ನು ದಮನ ಮಾಡುವ ಪ್ರಬಲ ಮಿಥ್ಯಗಳನ್ನು ಎದುರಿಸಬೇಕು.
* ಭಾರತೀಯ ದಂಡಸಂಹಿತೆಯಲ್ಲಿ ಸೆಕ್ಷನ್ 377ನ್ನು ತೆಗೆದುಹಾಕಲು ಒತ್ತಾಯಿಸಬೇಕು.
* ಭಯ, ಅವಮಾನವಿಲ್ಲದೆ ನಾವು ಇಚ್ಛಿಸಿದ ಲೈಂಗಿಕತೆಯನ್ನು ಪಾಲಿಸುವ ಹಕ್ಕನ್ನು ಸಮರ್ಥಿಸಿಕೊಳ್ಳಬೇಕು.
* ಮೌನ ಸಂಸ್ಕೃತಿಯನ್ನು, ಲೈಂಗಿಕತೆ ಶೋಷಿತರ ಮೇಲಿನ ಅಸಹಜತೆಯನ್ನು ಕೊನೆಗಾಣಿಸೋಣ.

ಸಮಾಜದ ಭಾಗವಾಗಿರುವ ಲೈಂಗಿಕತೆ ಶೋಷಿತರ ಮೇಲಿನ ಆಕ್ರಮಣವು ನಮ್ಮೆಲ್ಲರ ಮೇಲಿನ ಆಕ್ರಮಣ. ನೀವು ಲೈಂಗಿಕತೆ ಶೋಷಿತರಲ್ಲದಿದ್ದರೂ ಮಾನವ ಹಕ್ಕಿನ ಉಲ್ಲಂಘನೆಯ ವಿರುದ್ಧ ನಡೆಸುತ್ತಿರುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವ ಅಗತ್ಯವಿದೆ.

ನೀವು ಯಾವುದೇ ರೀತಿಯ ಲೈಂಗಿಕತೆಯ ದೌರ್ಜನ್ಯಕ್ಕೆ ಒಳಪಟ್ಟಿದ್ದರೆ ಅಥವಾ ನಮ್ಮ ಆಂದೋಲನದಲ್ಲಿ ಭಾಗವಹಿಸಲು ಬಯಸಿದರೆ ಈ ದೂರವಾಣಿಯ ಮೂಲಕ ಸಂಪರ್ಕಿಸಿ :

ಸಬ್‌ರಂಗ್-ದೂರವಾಣಿ : 6639414, 5309591 ಅಥವಾ ಈ ವಿಳಾಸಕ್ಕೆ ಬರೆಯಿರಿ :

ಸಬ್‌ರಂಗ್ ಮೊದಲ ಮಹಡಿ, ನಂ. 7, 8ನೇ ಮುಖ್ಯರಸ್ತೆ, ಮೂರನೇ ಫೇಸ್, ದೊಮ್ಮಲೂರು 2ನೇ ಹಂತ, ಬೆಂಗಳೂರು-560 071 ಅಥವಾ ಇಮೇಲ್ : sabrang@sangama.ilban.ernet.in ಮೂಲಕ ಸಂಪರ್ಕಿಸಿ.

ನಿಮ್ಮ ಹಕ್ಕು ನಿಮಗೆ ತಿಳಿದಿರಲಿ :

ನಿಮ್ಮನ್ನು ಪೊಲೀಸರು ಹಿಡಿದುಕೊಂಡು ಹೋದರೆ ನಿಮಗೆ ಕಾನೂನಿನ ರಕ್ಷಣೆಗಳಿವೆ.

* ನಿಮ್ಮನ್ನು ಬಂಧಿಸಿರುವ ಕಾರಣವನ್ನು ಕೂಡಲೇ ತಿಳಿದುಕೊಳ್ಳುವ ಹಕ್ಕು ನಿಮಗಿದೆ.
* ಜಾಮೀನು ಪಡೆದುಕೊಳ್ಳುವ (ಜಾಮೀನು ಪಡೆದುಕೊಳ್ಳಬಹುದಾದ ಅಪರಾಧಗಳಡಿ ನೀವು ಬಂಧಿಸಲ್ಪಟ್ಟಿದ್ದರೆ) ಹಕ್ಕು ನಿಮಗಿದೆ.
* 24 ತಾಸುಗಳೊಳಗೆ ನಿಮ್ಮನ್ನು ಮಾಜಿಸ್ಟ್ರೇಟ್‌ರ ಮುಂದೆ ಹಾಜರಿಪಡಿಸಬೇಕು.
* ನಿಮ್ಮ ಆಯ್ಕೆಯ ವಕೀಲರನ್ನು ಭೇಟಿ ಮಾಡುವ ಹಕ್ಕು ನಿಮಗಿದೆ.
* ನಿಮಗೆ ವಕೀಲರನ್ನು ನೇಮಿಸಿಕೊಳ್ಳಲಾಗದಿದ್ದರೆ, ನಿಮ್ಮನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ಸಮಯದಿಂದ ಉಚಿತ ಕಾನೂನಿನ ಸೇವಾ ಸಹಾಯ ಪಡೆಯುವ ಹಕ್ಕು ನಿಮಗಿದೆ.
* ನೀವು ಕೇಳಿದರೆ, ಪೊಲೀಸರು ನಿಮ್ಮ ಸ್ನೇಹಿತರು/ಸಂಬಂಧಿಗಳು/ನೀವು ನಂಬುವ ವ್ಯಕ್ತಿಯನ್ನು ಸಂಪರ್ಕಿಸಿ ಬಂಧಿಸಿರುವ ಕಾರಣ ತಿಳಿಸಬೇಕು.
* ಪೊಲೀಸರು ತಾವು ಸಂಪರ್ಕಿಸಿದ ವ್ಯಕ್ತಿಯ ಹೆಸರನ್ನು ತಮ್ಮ ಕೇಸ್ ಡೈರಿಯಲ್ಲಿ ದಾಖಲಿಸಬೇಕು.
* ಮೇಲೆ ತಿಳಿಸಿದ ಅಂಶಗಳ ಅತಿಕ್ರಮಿಸಿ ಬಂಧಿಸಿದರೆ ಅದು ಕಾನೂನು ಬಾಹಿರವಾಗಿದ್ದು, ನಿಮ್ಮನ್ನು ಬಂಧಿಸಿದ ಪೊಲೀಸ್ ಅಧಿಕಾರಿಯ ಮೇಲೆ ಕಾನೂನಿನ ಕ್ರಮ ಜರುಗಿಸಬಹುದು.

ನೆನಪಿಡಿ! ಪೊಲೀಸರಿಗೆ ನಿಮ್ಮಿಂದ ಹಣ ತೆಗೆದುಕೊಳ್ಳುವ, ಬೆದರಿಸುವ, ದೈಹಿಕವಾಗಿ/ಮೌಖಿಕವಾಗಿ ಹಿಂಸಿಸುವ ಅಧಿಕಾರವಿಲ್ಲ.

ಆಲ್ಟರ್‌ನೇಟಿವ್ ಲಾ ಫೋರಂ, ಗುಡ್ ಯಾಜ್ ಯು, ಮಾನಸ, ಸಬ್‌ರಂಗ್, ಸಂಗಮ, ಸ್ವಭಾವ ಹಾಗೂ ಇತರ ಬೆಂಬಲ ಗುಂಪುಗಳು ಮತ್ತು ವ್ಯಕ್ತಿಗಳು

ನಗುವಿನ ಹಿಂದೆ.....

ಮಧ್ಯಾಹ್ನದ ಧಗೆ ಗಾಳಿ ಸುಳಿವಿಲ್ಲ
ನೆರಳು ಯಾರದಿರಬಹುದು?
ಹಿರಿಯ ಜೀವ, ಪ್ರೌಢಕಳೆ
ಏನೋ ಧ್ಯಾನ ಮುದ್ರೆ ಫಕಫಕ ನಗು
ನೋಡುತ್ತ ಬೆರಗಾದೆ, ಎಲ್ಲೊ ನೋಡಿದ ನೆನಪು
ನನ್ನ ಹುಚ್ಚೇರಿಕೆ ಅರಿವಾದಂತೆ ಭಾಸ
ಬಾಯಿ ತೆರೆಯುವ ತವಕದಾಕೆ

ನೋಡವ್ವ ತಂಗಿ, ಭೂತಕ್ಕೆ ಬೆನ್ನಾಗಿ ನಡೆದೆ
ನೆಲೆ ಸಿಗದ ಸವೆಯದ ಹಾದಿ
ಬಂದ ದಾರಿಯನೊಮ್ಮೆ ನಿಂತು ನೋಡುವ ಬಯಕೆ
ಹೆತ್ತ ಮರುಕ್ಷಣಕೆ ದೂರಾದ ತಾಯ ನೆನಪು
ಕಣ್ಣೆತ್ತಿ ನೋಡದ ಜನಕನ ಅಹಮಿಗಿರಲಿ ಧಿಕ್ಕಾರ
ಸಾಕುತಂದೆಯ ಪ್ರೀತಿ ಕಣ್ಣಾಗಪು ಸಹಾ ಹಸಿರು

ಅರಿಸಿ ಪಟ್ಟ ಬಯಸಿ ಒಲಿದೆನೆ?
ಮುಗ್ಧೆಯ ಪ್ರೀತಿ ದೋಚಿದ ಚಕ್ರವರ್ತಿ
ಸರ್ವದಮನನ ಹೆತ್ತು ಕಂಡೆ ಬೆಳಕಿನ ಕನಸು
ಭೂತ ಮರೆತ ಮರುಳುತನಕೆ
ನಗುಬಂತು ಮಗಳೆ ಹೆದರಿದೆಯಾ ಹುಚ್ಚಿಯೆಂದು

ಹುಚ್ಚಲ್ಲದಿರೆ ಸುಖನಿರೀಕ್ಷೆ ಸಾಧ್ಯವಿತ್ತೆ?
ನನ್ನ ಮುಂದಿನ ಕಥೆ ಗೊತ್ತೆ ಮಗಳೆ
ದುರ್ವಾಸ ಶಾಪದ ನೆಪ ಒಲಿಸಿಕೊಂಡವಳ ನಿರಾಕರಣೆ
ಸಿಹಿ ಮಾಮರ ಸಸಿಯಲ್ಲಿ ಹುಳಿಹಣ್ಣು ಬಿಡುವಾಗ
ಬೇವಿನ ಮರದಲ್ಲಿ ಮಾವಿನ ಕನಸು

ತನ್ನ ಪ್ರತಿರೂಪ ಹೆರದ ಮಡದಿಯರ ಶಂಕಿಸದವನ
ಮೂರ್ಖತನಕೆ ನಗು ಬಾರದೆ ಬಂದೀತೆ ಬಿಕ್ಕು?
ತಾಯ್ತನದ ಮಮತೆ ಮೀರಿ ಕತ್ತು ಹಿಸುಕಿದ್ದ
ಪಾಪಕ್ಕೆ ತಾಪಕ್ಕೆ ಇಂಗಿತು ಕಣ್ಣೀರು
ನನ್ನ ಅವಮಾನಿಸಿದ ವಂಶದ ಸ್ಥಿತಿಗೆ
ಬಯಸಿದಾಗ ಬರುವುದು ನಗುವೇ
ಮರೆಯಾದ ನೆರಳಿಗೆ ಕಣ್ತೆರೆದೆ
ಬಿಸಿಲಹೊದ್ದ ದಾರಿ ಉದ್ದಕ್ಕೂ ಮಲಗಿತ್ತು.

- ಚಂದ್ರಮತಿ ಸೋಂದಾ

ಸೆರೆಯಾದ ಸುಶೀಲೆಯರು

1

ಇಂದ್ರನ ಅರಮನೆ
ಮೇನಕೆ ಊರ್ವಶಿಯರ
ನೃತ್ಯ ತರಂಗ ಮತ್ತೇರಿದ
ಗಂದರ್ವ ಪಡೆ
ನಗು ಬಿನ್ನಾಣ ವೈಯ್ಯಾರ
ಕೇಕೆ ಕೇಕೆ ಎಲ್ಲ ಕಡೆಗೂ
ನೂಪುರಗಳ ಕಲರವ
ಕಿಲ ಕಿಲ ಘುಲು ಘುಲು
ಪಿಸಿಪಿಸಿ ಕಿಸಿ ಕಿಸಿ

2

ಸಭೆ ಮಧ್ಯದಲ್ಲಿ ದ್ರೌಪದಿಯ
ಆರ್ತನಾದ ಕೂಗು, ಕೂಗಾಟ
ವಾದ-ಪ್ರತಿವಾದ
ದಿಕ್ಕೆಟ್ಟ ಮನದ ಅಳಲು
ಹೃದಯ ಬಿಚ್ಚಿಟ್ಟ
ಕೃಷ್ಣನ ಆಪ್ತ ಸಂವಾದ

3

ಕಾಲನ ಬೆನ್ನಟ್ಟಿ ಹಿಡಿದಿಟ್ಟು
ಹತ್ತು ಹಲವು ತಂತ್ರಕ್ಕೆ
ಷಡ್ಯಂತರ ಒಡ್ಡಿ ಮುಂದೊಗದೆ
ತಡೆ ಒಡ್ಡಿದ ಸಾವಿತ್ರಿ
ಹೀಗೆ ನಮ್ಮ ಹುಡುಗಿಯರು
ಸಾಲು ಸಾಲು ಸಾಲು

4

ಎದುರಲ್ಲಿ ಅದೇ ಸೂರು
ಕಿಂಡಿಯಿಲ್ಲದ ಗೋಡೆ
ಬಾಗಿಲೊಂದೆ ಹೊರಲೋಕಕ್ಕೆ
ದ್ವಾರ
ಅದಕ್ಕೂ ಜಡಿದ ಬೀಗ
ಬಿಚ್ಚಿಟ್ಟ ಎದೆ ಗೂಡಲ್ಲಿ
ತೊಟ್ಟಿಕ್ಕುವ ರಕ್ತ
ಅಲ್ಲಿ ನಮ್ಮ ಹುಡುಗಿಯರೆಲ್ಲಾ
ಶೀಲದಲ್ಲಿ ಸೆರೆ.

- ಡಾ. ಆರ್. ಸುನಂದಮ್ಮ

ಪ್ರತಿಕ್ರಿಯೆ

ಯಾರು 'ಹಿತವರು' ನಮಗೆ......

ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ಕಬೀರರ ಕಾವ್ಯದಲ್ಲಿ ಮಹಿಳಾ ವಿಷಯ'ವು ಗಂಭೀರವಾದ ಚಿಂತನೆಗೆ ಹಚ್ಚುವಂತಹ ಲೇಖನವಾಗಿದೆ. ಸಮಾಜದಲ್ಲಿ ಕಂಡುಬಂದ ಅನ್ಯಾಯ-ಅಸಮತೋಲನಗಳನ್ನು ಕಟುವಾಗಿ ಟೀಕಿಸಿದ ಕಬೀರರಂಥ ವಿಚಾರವಾದಿಗಳು ಕೂಡ ಸ್ತ್ರೀಯರನ್ನು ಲಘುವಾಗಿ ತೆಗೆದು ಕೊಂಡದ್ದು ಅತ್ಯಂತ ದುಃಖದ ವಿಚಾರ. ಆದರೆ ಕಬೀರರು ಮಾತ್ರವಲ್ಲ, ಆ ಕಾಲದಲ್ಲಿ ಭಕ್ತಿಪಂಥದ ಕನ್ನಡ ಕವಿಗಳೂ ಸ್ತ್ರೀಯರ ಬಗ್ಗೆ ತಳೆದಿದ್ದ ಧೋರಣೆ ಇದಕ್ಕಿಂತ ಭಿನ್ನವಾಗಿಲ್ಲ. ದಾಸವರೇಣ್ಯರೆಂದು ಪರಿಗಣಿಸಲ್ಪಡುವ ಪುರಂದರದಾಸ, ಕನಕದಾಸರ ಕವಿತೆಗಳಲ್ಲೂ ಹೆಣ್ಣಿಗೆ ಸ್ವತಂತ್ರ ಅಸ್ತಿತ್ವವೇ ಇಲ್ಲ, ಗಂಡಿಗೆ ವಿಧೇಯಳಾಗಿ ಇದ್ದರೆ ಮಾತ್ರ ಆಕೆಗೆ ಬದುಕು ಎಂಬ ಅಭಿಪ್ರಾಯಗಳು ಕಂಡುಬರುತ್ತವೆ. ಪುರಂದರದಾಸರು ತಮ್ಮ ಕವನದಲ್ಲಿ 'ಸತ್ಯವಂತರ ಸಂಗವಿರಲು ತೀರ್ಥವೇತಕೆ.... ಸನ್ನೆಯರಿತು ನಡೆಯದಂಥ ಸತಿಯಿದ್ದೇತಕೆ...' ಎಂದರೆ ಕನಕದಾಸರು '....ಮಡದಿಮಕ್ಕಳ ಮೋಹದಲಿ ಮನ ಸಿಲುಕುತ್ತ....' ಮೋಕ್ಷದ ದಾರಿ ಮುಚ್ಚಿಹೋಯಿತೆಂದು ಹಲುಬುತ್ತಾರೆ. 'ಹೆಣ್ಣು-ಹೊನ್ನು-ಮಣ್ಣು'ಗಳನ್ನು ಸಮೀಕರಿಸುತ್ತ ತನ್ನ ಮತ್ತು ದೇವರ ನಡುವೆ ಇವು ಅಡ್ಡಿಯಾಗಿ ಬಂದವೆಂದು ಆಕ್ಷೇಪಿಸುತ್ತಾರೆ. ಅವರಷ್ಟೇ ಏಕೆ, ಬುದ್ಧಿಜೀವಿ ಕವಿಯೆಂದು ನಾವೆಲ್ಲ ಮೆಚ್ಚಿಕೊಳ್ಳುವ ಬಸವಣ್ಣನೂ 'ನೀರಿಗೆ ನೈದಿಲೆ ಶೃಂಗಾರ...ನಾರಿಗೆ ಗುಣವೇ ಶೃಂಗಾರ....' ಅನ್ನುವುದಿಲ್ಲವೇ?

ಇತರ ಎಲ್ಲಾ ಸಮಸ್ಯೆಗಳ ಬಗೆಗೂ ಪುರೋಗಾಮಿ ನೆಲೆಯಲ್ಲಿ ಚಿಂತಿಸಿದ ಪುರುಷ ಸ್ತ್ರೀಯೂ ಒಬ್ಬ ಮನುಷ್ಯಳು ಎಂದು ಗುರುತಿಸಬೇಕಾದರೆ ಬಹಳಷ್ಟು ತಡಮಾಡಿದ್ದಾನೆ. ಮಧ್ಯಕಾಲೀನ ಸಮಾಜದಲ್ಲಿ ಪುರುಷನ ದೃಷ್ಟಿಯಲ್ಲಿ ಸ್ತ್ರೀಯು ಭೋಗ ಹಾಗೂ ಉಪಭೋಗದ ವಸ್ತುವಾಗಿದ್ದಳೇ ಹೊರತು ಒಬ್ಬ ವ್ಯಕ್ತಿಯಾಗಿರಲಿಲ್ಲ. ಆ ಕಾಲದ ಸ್ತ್ರೀಯರಿಗೂ ತಮಗಾಗುತ್ತಿರುವ ಅನ್ಯಾಯಗಳನ್ನು ಪ್ರತಿಭಟಿಸಬೇಕೆನ್ನುವ ಯೋಚನೆಯೇ ಬಂದಿರಲಿಲ್ಲ. ಆದ್ದರಿಂದ ಅವರು ಹಾಡುಗಳಲ್ಲಿ ತಮ್ಮ ಕಷ್ಟಗಳನ್ನು ಹೇಳಿಕೊಂಡರಷ್ಟೆ ಹೊರತು ಶೋಷಿಸಲ್ಪಡದೇ ಇರುವುದು ತಮ್ಮ ಹಕ್ಕು ಎಂಬುದು ಅವರ ಅರಿವಿಗೆ ಬರಲಿಲ್ಲ. ಸ್ತ್ರೀಯರು ತಮ್ಮೊಳಗಿನ ಶಕ್ತಿ-ಸಾಧ್ಯತೆಗಳನ್ನು ಗುರುತಿಸಿ ಕೊಂಡದ್ದು, ಪುರುಷರು ಆಕೆಯ ಅಸ್ತಿತ್ವವನ್ನು ಗಣನೆಗೆ ತೆಗೆದುಕೊಳ್ಳಲಾರಂಭಿಸಿದ್ದು ಹೆಚ್ಚೆಂದರೆ ಒಂದು ಶತಮಾನದಷ್ಟು ಇತ್ತೀಚಿನ ಬೆಳವಣಿಗೆ ಮಾತ್ರ.

ಆದರೆ, ನ್ಯಾಯಕ್ಕಾಗಿ, ಸಮಾನ ಹಕ್ಕುಗಳಿಗಾಗಿ ಸ್ತ್ರೀಯರು ಇಷ್ಟೆಲ್ಲ ಹೋರಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದ್ದರೂ ಅದನ್ನು ತಾತ್ಸಾರಭಾವದಿಂದ ಕಾಣುತ್ತಿರುವ, 'ಅಜ್ಜ ನೆಟ್ಟ ಆಲದಮರ'ಕ್ಕೆ ಆರಾಮವಾಗಿ ಆತುಕೊಂಡು ನಿಂತಿರುವ ಪುರುಷರು ಇನ್ನೂ ನಮ್ಮ ಮಧ್ಯೆ ಬಹಳಷ್ಟು ಮಂದಿ ಇದ್ದಾರೆ ಅನ್ನುವ ಕಹಿಸತ್ಯ ಬೇಸರ ಹುಟ್ಟಿಸುತ್ತದೆ. ಅನಕ್ಷರಸ್ಥರು ಮತ್ತು ಅಲ್ಪಶಿಕ್ಷಿತರ ಮಾತು ಹಾಗಿರಲಿ, ಸಾಕಷ್ಟು ಸುಶಿಕ್ಷಿತ ಪುರುಷರೂ ಕೂಡಾ ಸ್ತ್ರೀಯರ ವಿಚಾರದಲ್ಲಿ ತೀರಾ ಸಂಕುಚಿತ ಮನೋಭಾವನೆಯನ್ನು ಹೊಂದಿರುವುದು ನಮ್ಮ ಸುತ್ತಮುತ್ತ ನಿತ್ಯವೂ ಅನುಭವಕ್ಕೆ ಬರುತ್ತಿದೆ. ಅಷ್ಟೇ ಏಕೆ, ತಾವು ಬುದ್ಧಿಜೀವಿಗಳೆಂದು ತಿಳಿದುಕೊಳ್ಳುವ, ಕಥೆ-ಕಾದಂಬರಿ-ಲೇಖನಗಳನ್ನು ಪ್ರಕಟಿಸಿ ಪ್ರಸಿದ್ಧರಾಗಿರುವ ಬರಹಗಾರರೂ ಸಹ ಸ್ತ್ರೀವಾದವನ್ನು ಪುಷ್ಟೀಕರಿಸುವ ಸೋಗು ಮಾತ್ರ ಹಾಕುತ್ತಾರಷ್ಟೆ, ಹೊರತು ನಿಜಜೀವನದಲ್ಲಿ ತಾವು ಹೇಳಿದ್ದಕ್ಕೆ ತೀರಾ ವ್ಯತಿರಿಕ್ತವಾಗಿ ಹೆಂಡತಿ ತನ್ನ 'ಸನ್ನೆಯರಿತು' ತನಗೆ ಅನುಕೂಲವಾಗುವಂತೆ ನಡೆಯುತ್ತಿರಬೇಕೆಂದೇ ಬಯಸುತ್ತಾರೆ. ಮೊನ್ನೆ ಮೊನ್ನೆ ಒಂದು ಸಾಹಿತ್ಯ ಸಮ್ಮೇಳನದಲ್ಲಿ ಸ್ವತಃ ಪ್ರಸಿದ್ಧ ಬರಹಗಾರರಾದ ಅಧ್ಯಕ್ಷರು ತಮ್ಮ ವೈಯಕ್ತಿಕ ವಿಚಾರಗಳನ್ನು ಭಾಷಣದಲ್ಲಿ ಅನಗತ್ಯವಾಗಿ ತುರುಕುತ್ತ ಹೆಗ್ಗಳಿಕೆಯೆಂಬಂತೆ ಹೇಳಿದ ಮಾತುಗಳೇ ಇದಕ್ಕೆ ಸಾಕ್ಷಿ. "ಮನೆ-ಗಂಡ-ಮಕ್ಕಳ ಬದುಕನ್ನು ಶಿಸ್ತುಬದ್ಧವಾಗಿ ರೂಪಿಸಲು, ಮನೆಯನ್ನು ವ್ಯವಸ್ಥಿತವಾಗಿಟ್ಟುಕೊಳ್ಳಲು ಪೂರ್ಣಕಾಲಿಕ ಗೃಹಿಣಿಯಾಗಿರುವ ಹೆಂಡತಿಯ ಅಗತ್ಯವಿದೆ.' ಕಬೀರ-ಕನಕ-ಪುರಂದರರು ಅಂದಿನ ದಿನಗಳಲ್ಲಿ ಯಾವ ಮುಚ್ಚುಮರೆಯೂ ಇಲ್ಲದೆ ಹೆಣ್ಣನ್ನು ಎರಡನೆಯ ಪ್ರಜೆಯಾಗಿಯೋ ಅಥವಾ ನಿಕೃಷ್ಟವಾಗಿಯೋ ಕಂಡಿದ್ದಾರಾದರೆ ಇಂದಿನವರು ಇಷ್ಟೆಲ್ಲ ದೊಡ್ಡಮಟ್ಟದಲ್ಲಿ ಎಚ್ಚರಗೊಂಡ ಸ್ತ್ರೀಯರ ಕೂಗು ಕಿವಿಯ ಪಟಲಗಳು ಹರಿಯುವಂತೆ ಕೇಳಿಸಿದರೂ ಇಂತಹ ಧೋರಣೆ ಯನ್ನಿಟ್ಟುಕೊಂಡಿರುವಾಗ ಇವರಿಬ್ಬರ ನಡುವೆ ಯಾರು ನಮಗೆ ಹೆಚ್ಚು ಹಿತವರು?

ಪಾರ್ವತಿ ಜಿ. ಐತಾಳ್

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 40 ರೂ.

ಸಂಸ್ಥೆಗಳಿಗೆ : 100 ರೂ.

ಸಂ. ಮಂಡಳಿ

REGD No. CPMG/KA/BGE/289/2000

BOOK-POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067